(SRI A. R. BADARINARAYANA)

(*d*).—

District		1969-70	1970-71	1971-72
Dharwar	...	3	4	2
Karwar	...	—	1	1
Belgaum	...	1	3	4
Bijapur	...	7	11	1
Total	...	11	19	8

(*e*) There is no committee for selection.

SRI N. B. SIRDESAI.—Has it come to the notice of the Government that selections made during the year 1969 and 1971 were in-contravention of the then rules ?

† SRI A. R. BADRINARAYANA.—No. They were not in-contravention of the rules. Rules were adhered to.

SRI N, B. SIRDESAI.—May I know out of the applicants selected how many were direct applications and how many were allotted by the University ?

SRI A. R. BADRINARAYANA.—I am not in a position to give the break-up now.

MADAM SPEAKER.—Question Hour is over.

2-00 P. M.

CALLING ATTENTION TO MATTERS OF URGENT PUBLIC IMPORTANCE

(i) *re* : acute famine of fish in the Coastal belt of the State.

SRI B. BHASKAR SHETTY (Kaup).—I call the attention of the Hon, Minister of State for for Fisheries to the acute famine of fish in the Coastal belt of the State.

SRI K. T. RATHOD (Minister of State for Fisheries).—I state as follows .

ಮೈಸೂರು ರಾಜ್ಯದ ಕರಾವಳಿ ಪ್ರದೇಶದಲ್ಲಿ ಮೀನು ದೊರೆಯುವ ಮುಖ್ಯ ಮೀನು ಬಂಗುಡೆ ಮತ್ತು ಭೂತಾಯಿ. ಪ್ರಸಕ್ತ ಮೀನು ಹಂಗಾಮಿನಲ್ಲಿ ದೊರೆತ ಇವೆರಡು ಜಾತಿಗಳ ಮೀನುಗಳ ಪ್ರಮಾಣ ತೀರಾ ಕಡಿಮೆ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ. ಈ ಹಿಂದೆ ಪ್ರತಿ ವರ್ಷ ಸುಮಾರು 46,000 ಟನ್ನು ಬಂಗುಡೆ ಮೀನು, 18,000 ಟನ್ನು ಭೂತಾಯಿ ಮೀನು

ದೊರೆಯುತ್ತಿತ್ತು. ಆದರೆ ಕಳೆದ ಆರು ತಿಂಗಳುಗಳಲ್ಲಿ ಕೇವಲ 2,000 ಟನ್ನು ಬಂಗುಡೆ ಮತ್ತು 5,000 ಟನ್ನು ಭೂತಾಯಿ ದೊರೆತಿದೆ. ಮುಂಗಾರು ಮಳೆ ಪ್ರಾರಂಭವಾಗುತ್ತಲೇ, ಈ ಮೀನು ಗುಂಪುಗಳು ದಂಡೆಯ ಹತ್ತಿರ ವಲಸೆ ಬರುವುದುಂಟು. ಆಗ ಮೀನುಗಾರರು ರಂಪಣಿ ಬಲೆಯಲ್ಲಿ ಈ ಮೀನುಗಳನ್ನು ಹಿಡಿಯುತ್ತಾರೆ. ಈ ವರ್ಷ ಈ ಮೀನು ಗುಂಪುಗಳು ವಿರಳವಾಗಿರುವುದರಿಂದ, ರಂಪಣಿ ಮೀನುಗಾರರ ಆರ್ಥಿಕ ಸ್ಥಿತಿ ತುಂಬಾ ಹದಗೆಟ್ಟಿದೆ. ಮೀನು ಕ್ಷಾಮದ ಇಂಥ ಪ್ರಸಂಗ ಬರುವುದು ಹತ್ತು ವರ್ಷಕ್ಕೊಮ್ಮೆ ಎಂದು ತಜ್ಞರು ಸರ್ಕಾರಕ್ಕೆ ತಿಳಿಸಿದ್ದಾರೆ. ಸಮುದ್ರದ ನೀರಿನಲ್ಲಿ ಉಂಟಾಗುವ ಭೌತಿಕ, ರಾಸಾಯನಿಕ ಮತ್ತು ಜೈವಿಕ ಬದಲಾವಣೆಗಳು ಮೀನು ಗುಂಪುಗಳ ವಲಸೆಯ ಮೇಲೆ ಪ್ರಭಾವ ಬೀರುತ್ತವಂತೆ. ಆದರೆ, ಈ ಮೀನು ವಲಸೆ ಎಂದು, ಹೇಗೆ ನಡೆಯುವುದು ಎಂಬುದನ್ನು ಇಂದಿನ ನಮ್ಮ ತಿಳಿವಳಿಕೆಯ ಸ್ಥಿತಿಯಲ್ಲಿ ಹೇಳುವಂತಿಲ್ಲ.

ಸರ್ಕಾರಕ್ಕೆ ಈ ಪರಿಸ್ಥಿತಿ ಕುರಿತು ವರದಿ ಬಂದಿದೆ. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ರಂಪಣಿ ಮೀನುಗಾರ ಸಂಘ ಮತ್ತಿತರ ಸಂಸ್ಥೆಗಳಿಂದ ಮನವಿಗಳೂ ಬಂದಿವೆ. ಬಂಗುಡೆ ಮತ್ತು ಭೂತಾಯಿ ಮೀನುಗಳ ಕ್ಷಾಮದಿಂದ ಸುಮಾರು 10,000 ರಂಪಣಿ ಮೀನುಗಾರರ ಕುಟುಂಬಗಳು ಸಂಕಟಗ್ರಸ್ತವಾಗಿವೆ ಎಂದು ವರದಿಯಾಗಿದೆ. ರಂಪಣಿ ಮೀನುಗಾರರ ಸಂಕಷ್ಟ ನಿವಾರಣೆಗೆ ಸರ್ಕಾರದವರು ಸಹಾನುಭೂತಿಯಿಂದ ತುರ್ತು ಗಮನ ನೀಡಿದ್ದಾರೆ. ತುರ್ತು ಪರಿಹಾರ ಕ್ರಮವಾಗಿ ಸಹಾಯ ನೀಡಲು ಪ್ರತಿಯೊಂದು ಸಂಕಟಗ್ರಸ್ತ ಮೀನುಗಾರ ಕುಟುಂಬಕ್ಕೆ 250 ರೂಪಾಯಿಯಂತೆ ಸರ್ಕಾರದವರು ಒಟ್ಟು 25.00 ಲಕ್ಷ ರೂಪಾಯಿ ನಿಬಡ್ಡಿ ಸಾಲ ಮಂಜೂರು ಮಾಡಿದ್ದಾರೆ. ನೈಲಾನು ನೂಲು, ಹತ್ತಿ ನೂಲು, ಮೀನು ಬಲೆ ಮುಂತಾದವುಗಳ ಬಗ್ಗೆ ಸೇಕಡಾ 33⅓ ಸಹಾಯ ಧನವನ್ನು ಸಹ ಮಂಜೂರು ಮಾಡಿದ್ದಾರೆ. ಮೀನು ಹಿಡಿಯುವ ತೋಡು ದೋಣಿಗಳ ಬಗ್ಗೆ ಎಂ. ಎಫ್. ಎ. ಎರ್. ಯೋಜನೆ ಮೇರೆಗೆ ಸಹಾಯ ಧನ ಕೊಡುವ ವಿಚಾರ ಸಹ ಪರಿಶೀಲನೆಯಲ್ಲಿದೆ.

ಈ ಕ್ರಮಗಳಿಂದ ಮೀನುಗಾರರ ಸದ್ಯದ ಸಂಕಟ ಪರಿಸ್ಥಿತಿಯು ನಿವಾರಣೆ ಹೊಂದಬಹುದೆಂದೂ ಮುಂಬರುವ ಮೀನು ಹಂಗಾಮಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೀನು ಹಿಡಿಯುವುದು ಸಾಧ್ಯವಾಗಬಹುದೆಂದೂ ಸರ್ಕಾರದವರು ಆಶಿಸುತ್ತಾರೆ.

ದಕ್ಷಿಣ ಕನ್ನಡ ರಂಪಣ ಮೀನುಗಾರರ ಸಂಘದವರು ಸಲ್ಲಿಸಿದ ಮನವಿಯಲ್ಲಿನ ಇತರ ಬೇಡಿಕೆಗಳು—ಎಂದರೆ, ಮೀನುಗಾರಿಕೆ ರಸ್ತೆಗಳ ಸುಧಾರಣೆ, ಮನೆಯಿಲ್ಲದ ಮೀನುಗಾರರಿಗೆ ಪರಂಬೋಕು ಮತ್ತು ಸಾಗುವಳಿಯಾಗಿಲ್ಲದ ಜಮೀನುಗಳ ಹಂಚಿಕೆ, ಮನೆಕಟ್ಟಿಕೊಳ್ಳಲು ಸಾಲಗಳ ಮಂಜೂರಾತಿ, ಮೈಸೂರು ರಾಜ್ಯ ಮೀನುಗಾರಿಕೆ ಸಲಹಾ ಮಂಡಲಿಯಲ್ಲಿ ಸಂಘಕ್ಕೆ ಪ್ರಾತಿನಿಧ್ಯ, ಮೀನು ಸಾಗಣೆ ಸೌಕರ್ಯಗಳ ಏರ್ಪಾಟು, ಮೀನೆಣ್ಣೆ ತಯಾರಿಕೆಗೆ ಯಂತ್ರೋಪಕರಣದ ಏರ್ಪಾಟು—ಇವೇ ಮುಂತಾದ ಬೇಡಿಕೆಗಳು, ಮೀನು ಕ್ಷಾಮದ ಪರಿಣಾಮವಾಗಿ ಸಂಕಷ್ಟಕ್ಕೀಡಾದ ಮೀನುಗಾರರಿಗೆ ತುರ್ತು ಪರಿಹಾರ ಒದಗಿಸುವ ವಿಚಾರಕ್ಕೆ ನೇರವಾಗಿ ಸಂಬಂಧಿಸಿಲ್ಲ, ಆದರೆ ಕರಾವಳಿ ಪ್ರದೇಶದ ಮೀನುಗಾರರ ಮತ್ತು ಮೀನುಗಾರಿಕೆ ಉದ್ದಿಮೆಯ ಸಮಸ್ಯೆಗಳನ್ನೂ ಕುರಿತು ಕೈಕೊಳ್ಳಬೇಕಾದ ದೀರ್ಘಾವಧಿ ಕ್ರಮಗಳನ್ನೂ ಸ್ಪಷ್ಟಪಡಿಸುತ್ತವೆ. ಈ ವಿಚಾರಗಳು ಪರಿಶೀಲನೆಯಲ್ಲಿದೆ. ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿ, ಸೂಕ್ತ ಕ್ರಮ ಕೈಕೊಳ್ಳಲಾಗುವುದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಕೆ. ಟಿ. ರಾಥೋಡ್ ರವರು ಈ ದಿವಸ ಕನ್ನಡದಲ್ಲಿ ಕಾಲ್ ಅಟೆನ್‌ಷನ್ ನೋಟೀಸಿಗೆ ಉತ್ತರಕೊಟ್ಟಿದ್ದಾಗಿ ಅವರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು.—ಎಕೆ ಮಾನ್ಯ ಚಿಕ್ಕೇಗೌಡರೂ ಕೂಡ ಅನೇಕಾವರ್ತಿ ಕನ್ನಡದಲ್ಲೇ ಉತ್ತರ ಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭೆಯಲ್ಲಿಲ್ಲದಿದ್ದರೆ ಅದಕ್ಕೆ ಯಾರು ಹೊಣೆಗಾರರು ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಕ್ಷಾಮಕ್ಕೆ ತುತ್ತಾಗಿರತಕ್ಕ ರಂಪಣೀ ಮೀನುಗಾರರಿಗೆ 250 ರೂಪಾಯಿ ಸಾಲವನ್ನು ಕೊಡಲಾಗುತ್ತದೆಂದು ತಿಳಿಸೋಣವಾಯಿತು. ಅದು ಬಹಳ ಕಡಮೆ ಆದುದರಿಂದ ಅದನ್ನು ಒಂದು ಸಾವಿರಕ್ಕಾದರೂ ಹೆಚ್ಚುಮಾಡುವರೇ ? ಮತ್ತು ಆ ಹಣವನ್ನು ಯಾವ ರೂಪದಲ್ಲಿ ಹೇಗೆ ಕೊಡುತ್ತಾರೆ ಎಂಬುದನ್ನು ತಿಳಿಸುತ್ತಾರೆಯೆ ?

ಶ್ರೀ ಕೆ. ಟಿ. ರಾಥೋಡ್.— ಆದರೆ ಕರಾವಳಿಯ ಪ್ರದೇಶದಲ್ಲಿರತಕ್ಕ ಮೀನುಗಾರರ ಪರಿಸ್ಥಿತಿಯೇ ಒಂದು ರೀತಿ, ಮತ್ತು ಒಳನಾಡಿನಲ್ಲಿರತಕ್ಕ ಮೀನುಗಾರರ ಪರಿಸ್ಥಿತಿಯೆ ಒಂದು

(ಶ್ರೀ ಕೆ. ಟಿ. ರಾಥೋಡ್)

ರೀತಿ. ಒಳನಾಡು ಮೀನುಗಾರರಿಗೆ ಬರಗಾಲದಲ್ಲಿ ಮೀನು ಸಿಕ್ಕದೆ ಇದ್ದಾಗ ಅವರು ಬೇರೆ ಕೆಲಸ ಮಾಡುವುದಕ್ಕೆ ಅವಕಾಶವುಂಟು. ಇನ್ನು ಅವರಿಗೆ ಕೊಡತಕ್ಕ 250 ರೂಪಾಯಿಗಳ ಸೌಲಭ್ಯವನ್ನು ಸಾಲದ ರೂಪದಲ್ಲಿ ಸೊಸೈಟಿಗಳ ಮೂಲಕ ಕೊಡಲಾಗುವುದು.

Smt. WINNIFRED F. FERNANDES.—It was stated that about 10,000 families depending upon Rampanibale are reported to have been affected by this famine. It is not so; more than 26,000 families all round the coastal belt have been affected by this famine. The Government has given Rs. 26 lakhs for this gesture. At the same time, I request the Government to give at least Rs. 10,000/- per family, Rs. 500/-as loan and Rs. 500/-as relief. As these people are hard pressed for foodgrains, will the Government arrange for the supply of foodgrains to these people through fair-price shops ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯಣಿಯರು ಇಂಥಾ ಕಷ್ಟಕ್ಕೆ ಒಳಗಾಗಿರತಕ್ಕ ಜನರ ಸಂಖ್ಯೆ ಬಹಳ ಜಾಸ್ತಿಯಾಗಿದೆ, ಅವರಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದಿದ್ದಾರೆ, ಆದರೆ ಸರ್ಕಾರದವರು ಶೇಕರಣೆ ಮಾಡಿರತಕ್ಕ ಅಂಕೀಅಂಶಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ 80 ರಂಪಣಿ ಮೀನುಗಾರರ ಸಂಘಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 72 ಸಂಘಗಳಿವೆ. ಅಂದರೆ ಎಲ್ಲವೂ ಸೇರಿ ಒಟ್ಟಿಗೆ 152 ಸಂಘಗಳಾದವು. ಒಂದೊಂದು ರಂಪಣೀ ಸೊಸೈಟಿಗಳಲ್ಲೂ ಇರತಕ್ಕ ಸದಸ್ಯರ ಸಂಖ್ಯೆ 40—80 ಎಂದಿಟ್ಟುಕೊಂಡರೂ, ಇವರೆಲ್ಲರ ಒಟ್ಟು ಸಂಖ್ಯೆ 10 ಸಾವಿರಕ್ಕೆ ಮೇಲಲ್ಲ. ಇನ್ನು ಅವರಿಗೆ ಕೊಡತಕ್ಕ ಸಾಲದ ಸೌಲಭ್ಯ ಸಾಲದೆಂದು ಹೇಳಿದ್ದಾರೆ ಆದರೆ ಸರ್ಕಾರದವರು ಸಧ್ಯ ಅವರಿಗೆ ಮೂರು ತಿಂಗಳ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದ್ದಾರೆ. ಮುಂದಿನ ಮೂರು ತಿಂಗಳಲ್ಲಿ ಅವರ ಮೀನುಗಾರಿಕೆ ಪರಿಸ್ಥಿತಿ ಉತ್ತಮಗೊಳ್ಳಬಹುದೆಂದು ಸರ್ಕಾರದ ಆಶೆಯು. ಹಾಗೆ ಅವರ ಸುಧಾರಣೆ ಈ ಮೂರು ತಿಂಗಳಲ್ಲಿ ಆಗದಿದ್ದರೆ ಮುಂದೆ ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಸಚಿವರು ಅವರಿಗೆ ಕೊಡತಕ್ಕ ಸಾಲದ ಸೌಲಭ್ಯವನ್ನು ಸೊಸೈಟಿಗಳ ಮೂಲಕ ಕೊಡಲಾಗುತ್ತದೆಂದು ಹೇಳಿದರು. ಅದರಿಂದ ಉದ್ದೇಶಪಟ್ಟ ಕಾರ್ಯ ಸಫಲವಾಗುವುದಿಲ್ಲ. ಏಕೆಂದರೆ ಅನೇಕರಿಗೆ ಆ ಸೊಸೈಟಿಗಳಲ್ಲಿ ಬೇರೆ ಬೇರೆ ಸಾಲಗಳಿರುತ್ತವೆ. ಅದಕ್ಕೆ ಈ ಹಣವನ್ನು ಅವರು ಒತ್ತಾರ ಮಾಡಿಕೊಂಡರೆ ಅವರಿಗೆ ಅನುಕೂಲ ಮಾಡಿದ್ದೆಲ್ಲಾಯಿತು ? ಆದುದರಿಂದ ಇದನ್ನು ಆ ರಂಪಣೀ ಮೀನುಗಾರರಿಗೆ ನೇರವಾಗಿ ಕೊಡುವುದಕ್ಕೆ ಏರ್ಪಾಡನ್ನು ಮಾಡುತ್ತಾರೆಯೇ ?

ಶ್ರೀ ಕೆ. ಟಿ. ರಾಥೋಡ್.—ಅನೇಕರು ಈ ರಂಪಣಿ ಬಲೆಗಾರರ ಸಂಘಕ್ಕೆ ಸದಸ್ಯರಾಗಿರುವುದಿಲ್ಲ. ಆದ್ದರಿಂದ ಈ ಹಣವನ್ನು ಸೊಸೈಟಿಗಳ ಮೂಲಕ ಕೊಡತಕ್ಕದ್ದೇ ಉತ್ತಮವಾದುದು ಎಂಬುದು ಸರ್ಕಾರದವರ ಭಾವನೆ. ಆದರೆ ನೇರವಾಗಿ ಇವರಿಗೆ ಸಾಲ ಕೊಡುವುದಕ್ಕೆ ಅವಕಾಶವಿಲ್ಲ. ಇವರಿಗೆ ಮಾನ್ಯ ಸದಸ್ಯರು ತಿಳಿಸತಕ್ಕಂಥ ತೊಂದರೆಗಳೇನಾದರೂ ಬಂದಾಗ ಅವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅಂಥವುಗಳ ಬಗ್ಗೆ ಸರ್ಕಾರ ಬೇರೆ ರಿಯಾಯಿತಿಗಳನ್ನು ಕೊಡಲು ಪರಿಶೀಲನೆ ಮಾಡುತ್ತಾರೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಯಪ್ರಕಾಶ ಶೆಟ್ಟಿ.—ರಂಪಣಿ ಬಲೆಗಾರರಲ್ಲದವರೂ ಕೂಡ ಸಾವಿರಾರು ಜನ ಕಷ್ಟಕ್ಕೆ ಸಿಕ್ಕಿದ್ದಾರೆ. ಅವರಿಗೇನು ಸಹಾಯ ಮಾಡುತ್ತಾರೆ.

ಶ್ರೀ ಕೆ. ಟಿ. ರಾಥೋಡ್.— ಅವರೂ ಈ ಸಂಸ್ಥೆಗೆ ಸದಸ್ಯರಾದರೆ ಅವರಿಗೂ ಸಹಾಯ ಮಾಡಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಮೀನುಗಳಿಗೆ ಕ್ಷಾಮ ಬರುವುದಕ್ಕೇನು ಕಾರಣ ? ಮೀನು ತಿನ್ನತಕ್ಕವರಲ್ಲದವರೂ ಮೀನನ್ನು ತಿನ್ನುವುದಕ್ಕೆ ಪ್ರಾರಂಭಮಾಡಿದ್ದರಿಂದ ಅಂದರೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ವೀರೇಂದ್ರಪಾಟೀಲರೂ ಇವುಗಳನ್ನು ತಿನ್ನುವುದಕ್ಕೆ ಪ್ರಾರಂಭಮಾಡಿದ್ದರಿಂದಲೇನಾದರೂ ಈ ಕ್ಷಾಮ ಉಂಟಾಯಿತೇ ?

ಶ್ರೀ ಕೆ. ಟಿ. ರಾಥೋಡ್.—ಇಂಥ ಬರ ಹೀಗೆ ಪೀರಿಯಾಡಿಕಲ್ಲಾಗಿ ಬರುತ್ತೇಂಬುದು ತಜ್ಞರ ಅಭಿಪ್ರಾಯ. ಸೀಗಡಿ ಮೀನು ಕಡಿಮೆಯಾಗಿರುವುದರ ಬಗ್ಗೆ ಸಂಶೋಧನೆ ನಡೆಸಲು ಒಂದು ತಜ್ಞರ ಸಮಿತಿಯನ್ನು ಮಾಡಿದೆ. ಆ ಸಮಿತಿಯವರು ಇದಕ್ಕೂ ಕೂಡ ಕಾರಣವನ್ನು ಹುಡುಕಿ ಕೊಡುತ್ತಾರೆಂದು ಹೇಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಮೀನುಗಳಿಗೆ ಕ್ಷಾಮ ಉಂಟಾಗುವುದಕ್ಕೆ ಒಂದು ಕಾರಣ ಎಂದರೆ ಅವು ಬಲಿತು ಮರಿಗಳನ್ನು ಹಾಕತಕ್ಕ ವಯಸ್ಸು ಎನಿದೆ ಆ ವಯಸ್ಸಿಗೇ ಮೊದಲೇ ಅವುಗಳನ್ನು ಹಿಡಿಯುತ್ತಿರುವುದರಿಂದ ಹೀಗೆ ಕ್ಷಾಮ ಉಂಟಾಗುವುದಕ್ಕೆ ಕಾರಣವಾಗಿದೆ. ಅದನ್ನು ತಡೆಗಟ್ಟುವುದಕ್ಕೇನು ಕ್ರಮ ಕೈಗೊಳ್ಳುವರು ?

ಶ್ರೀ ಕೆ. ಟಿ. ರಾಥೋಡ್.—ತಾವು ಆ ತಜ್ಞರ ಸಮಿತಿಯ ಮುಂದೆ ಈ ಸಲಹೆಯನ್ನ ಕೊಟ್ಟರೆ ಅವರು ಇದನ್ನು ಪರಿಶೀಲಿಸುತ್ತಾರೆ

(*ii*) *re* : enhancement of fares of M. S. R. T. C. luxury Services etc.,

Sri M. H. JAYAPRAKASH NARAYAN (Sirisi).—I call the attention of the Minister for Labour to the enhancement of fares of luxury services by M.S.R.T.C. and issue of permits for contract carriages on nationalised routes.

Sri AZEEZ SAIT (Minister for Labour).—I state as follows ;

1. The luxury services of Mysore State Road Transport Corporation are equipped and maintained with all modern amenities to provide maximum comforts to the travelling public. The fare charged by the Mysore State Road Transport Corporation for the luxury buses prior to enhancement was 0–30 paise for a stage of 6.4 Kms.

2. Due to rise in prices of chassis, spares and fuel, the operation cost had gone up considerably and it was becoming increasingly difficult to run services of M.S.R.T.C. on economic lines. It was all the more difficult in respect of luxury services, since the number of seats provided in luxury services are only between 30-34. In order to run the luxury services and to continue to provide maximum comforts to the travelling public, without sustaining loss, the M.S.R.T.C. was left with no alternative but to enhance the fares commensurate with the operational cost.

3. The fares were therefore enchanced from 0-30 paise to 0-40 paise for a stage of 6-4 Kms. with effect from 20-12-1972.

4. However, on the basis of representations from the travelling public, and to face the competition from private operators who began to under cut the rates of the M.S.R.T.C. the fares have been revised once again bringing them down from 0-40 paise to 0-35 paise for a stage of 6.4 Kms. with effect from 18–2–1973.

(SRI AZEEZ SAIT)

5. These rates are on par with the rates prevailing in most of the neighbouring States for similar services except Kerala which are slightly lower. The comparative rates are as follows:—

Kerala	...	4.5 Paise per Km.
Andhra Pradesh	...	5.75 Paise per Km.
Maharashtra	...	6.83 Paise per Km.
Mysore	...	5.47 Paise per Km.

6. It is no doubt a fact t at some of the contract carriage services operated by private operators are picking up and setting down passengers enroute on the nationalised routes in violation of the conditions of the permits. This has naturally affected the services and the earnings of the Mysore State Road Transport Corporation and also other stage carriage operators.

7. In order to put down these clandestine operations on the part of the private operators Government have taken the following measures :—

(i) Checking has been intensified by the Officers of Police and the Motor Vehicles Department. In addition 3 Joint Special Squads have been constituted by Government consisting of Officers drawn from Police, Motor Vehicles Departments and the Police Officers deputed to M.S.R.T.C. These squads have started functioning from 15-6-1972 and have been doing very satisfactory work since then.

(ii) Rule 111 of the Mysore Motor Vehicles Rules, 1963 has been amended whereby (a) the Contract Carriage Operator has to carry a list in the bus indicating the passengers name and addresses included in the contract' duly attested by the Secretary, Regional Transport Authority, (b) the bus as a whole has to be hired and that a no individul seats to are be booked and (c) that no individual passenger who is not included in the contract shall be picked up or set down along the line of the route.

This rule has been challenged in the High Court and stay has been given by the High Court.

(iii) The other legislative measures which are at the final stage are local amendment of Sections 45 and 60 of the Motor Vehicles Act, 1939.

In order to have better control over the grant of contract carriage permits, the amendment of Section 45 of the Motor Vehicles Act, 1939 has been contemplated. With this amendment the power of granting contract carriage permits for vehicles plying in more than two regions will be vested in the State Transport Authority.

8. Since the existing penal measures in the Acts Rules had no desired effect in curbing the Violation of the conditions of the permit,

Section 60 of the M. V. Act, 1939 is proposed to be amended. This amendment provides for deterrent action. Second breach of the condition of the permit will result in suspension of the permit and the third breach will result in cancellation of the permit. The bill amending the Section will be introduced in the current Session of the Assembly.

9. With these measures and also the fareshaving been reduced from 0-40 Paise to 0-35 Paise for a stage of 6.4 Kms. it would be passible to get over the difficulties faced by the travelling public.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಲಕ್ಷುರಿ ಬಸ್‌ನಲ್ಲಿ ಆಗತಕ್ಕಂಥ ನಷ್ಟವನ್ನು ಸರಿದೂಗಿಸಲು 30 ಪೈಸೆ ಪರ್ ಸ್ಟೇಜು ಇದ್ದುದನ್ನು 40 ಪೈಸೆಗೆ ಏರಿಸಿ ನಂತರ 35 ಪೈಸೆಗೆ ಇಳಿಸಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಲಕ್ಷುರಿ ಬಸ್‌ಗೆ ಒಂದು ಸ್ಟೇಜಿಗೆ 30 ಪೈಸೆ ಇದ್ದಾಗ ಅದರ ಟೋಟಲ್ ಕಲೆಕ್ಷನ್ ಎಷ್ಟು; 40 ಪೈಸೆ ಇದ್ದಾಗ ಅದರ ಟೋಟಲ್ ಕಲೆಕ್ಷನ್ ಎಷ್ಟು; 35 ಪೈಸೆಗೆ ಇಳಿಸಿದಾಗ ಅದರ ಟೋಟಲ್ ಕಲೆಕ್ಷನ್ ಎಷ್ಟು? ಬಸ್ ದರವನ್ನು ಏರಿಸಿದ ತಕ್ಷಣ ಸಿರಸಿ, ಸಿದ್ದಾಪುರ, ಧಾರವಾಡ, ಹುಬ್ಬಳ್ಳಿ, ಶ್ರವಣಬೆಳಗೊಳಗಳಿಗೆ ಹೋಗತಕ್ಕ ಬಸ್ಸುಗಳಲ್ಲಿ ಜನರ ಸಂಖ್ಯೆ 30–34 ಇದ್ದುದ್ದು, 10-14ಕ್ಕೆ ಇಳಿದಿದೆ, ಇದು ತಮ್ಮ ಗಮನಕ್ಕೆ ಬಂದಿದೆಯೇ? ಪ್ರೈವೇಟ್ ಕ್ಯಾರೇಜ್‌ಸ್ ಬಸ್‌ಗಳು ಬಸ್ ಸ್ಟ್ಯಾಂಡಿನಲ್ಲಿ ಪ್ಯಾಸೆಂಜರ್ಸ್ ಅನ್ನು ತುಂಬಿಕೊಂಡು, ಕಡಿಮೆ ಬೆಲೆಗೆ ಕರೆದುಕೊಂಡು ಹೋಗುತ್ತಾರೆ. ಇದರಿಂದ ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಿಗೆ ಆಗತಕ್ಕ ನಷ್ಟವನ್ನು ವಿವರವಾಗಿ ಹೇಳುತ್ತೀರಾ?

ಶ್ರೀ ಅಜೀಜ್ ಸೇಟ್.—30 ಪೈಸೆಯಿಂದ 40 ಪೈಸೆಗೆ ಏರಿಸಿ ಮತ್ತೆ 35 ಪೈಸೆಗೆ ಒಂದು ಸ್ಟೇಜ್ ಎಂದು ಮೂರು ಹಂತಗಳಲ್ಲಿ ಚೇಂಜಸ್ ಆಗಿದೆ. ಇದರಿಂದ ನಷ್ಟ ಎಷ್ಟಾಗಿದೆ ಎಂದು ಮಾನ್ಯ ಸದಸ್ಯರು ವಿವರವನ್ನು ಕೇಳುತ್ತಿದ್ದಾರೆ. ಅದಕ್ಕೆ ಸಧ್ಯದಲ್ಲಿ ಅಂಕಿ ಅಂಶಗಳು ನನ್ನ ಹತ್ತಿರ ಇಲ್ಲ. 40 ಪೈಸೆಗೆ ಏರಿಸಿದ ಸಂದರ್ಭದಲ್ಲಿ M.S.R.T.C. have undergone sufficient loss. The passengers were not getting into our buses. Therefore the Board has taken a decision to reduce the enhanced fare.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕ್ಯಾಂಡಿಸ್ಟ್ರೈನ್ ಅಪರೇಷನ್ ಅನ್ನು ತೆಗೆದುಹಾಕುವುದಕ್ಕೆ ಮೂರು ಮೆಷರ್ಸ್‌ಗಳನ್ನು ಕೊಟ್ಟಿದ್ದೀರಿ. ಇವನ್ನು ಇಂಟ್ರಡ್ಯೂಸ್ ಮಾಡಿದಮೇಲೆ, ನಿಮ್ಮ ಸ್ಕ್ವಾಡ್‌ನವರು ಎಷ್ಟು ಕೇಸುಗಳನ್ನು ಹಾಕಿದ್ದಾರೆ, ಎಷ್ಟು ತೀರ್ಮಾನವಾಗಿವೆ, ಎಷ್ಟು ಪನಿಷ್‌ಮೆಂಟ್ ಆಗಿದೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? 15-6-1972ರಿಂದ ಸ್ಕ್ವಾಡ್ ಚೆಕಿಂಗ್ ಇದೆ. ನಿಮ್ಮ ರೂಲ್ಸ್ ಪ್ರಕಾರ ಪ್ಯಾಸೆಂಜರ್ಸ್ ಲಿಸ್ಟ್ ಇರಬೇಕು, ಪ್ಯಾಸೆಂಜರ್ಸ್ ಇಷ್ಟು ಇರಬೇಕು ಎಂದು ಹೇಳುತ್ತೀರಿ ಅವರ ಹತ್ತಿರ ಲಿಸ್ಟ್ ಇರುವುದಿಲ್ಲ. ಮತ್ತು ಮಧ್ಯ ಪ್ಯಾಸೆಂಜೆರ್ಸ್ ಅನ್ನು ತೆಗೆದುಕೊಳ್ಳಕೂಡದು ಎನ್ನುವ ಕಂಡೀಷನ್ಸ್ ಇಟ್ಟಿದ್ದೀರಿ. ಆದರೆ ಮಧ್ಯದಲ್ಲೂ ಪ್ಯಾಸೆಂಜರ್ಸ್‌ನ್ನು ತೆಗೆದುಕೊಳ್ಳುತ್ತಾರೆ, ಇಂಥಾದ್ದಕ್ಕೆ ಕೇಸ್ ಹಾಕಬೇಕು ಎಂದು ತತ್ವ ಹೇಳುತ್ತೀರಿ, ಈಗ ಎಷ್ಟು ಕೇಸ್ ಬುಕ್ ಮಾಡಿದ್ದೀರಿ, ಎಷ್ಟು ಕ್ಯಾರೇಜಸ್ ಗನ್ನು ಸಸ್ಪೆಂಡ್ ಮಾಡಿದ್ದೀರಿ. ಎಷ್ಟು ಕ್ಯಾರೇಜಸ್‌ಗಳಲ್ಲಿ ಇಂಥ ನ್ಯೂನತೆಗಳನ್ನು ಕಂಡು ಹಿಡಿದಿದ್ದೀರಿ ಎನ್ನುವ ವಿವರ ಹೇಳುತ್ತೀರಾ?

ಶ್ರೀ ಅಜೀಜ್ ಸೇಟ್.—ನಾನು ಈ ಸದನದ ಸದಸ್ಯರಿಗೆ ಒಂದು ವಾರದ ಹಿಂದೆ ಪೂರ್ಣ ಆಗಿ ಒಂದು ನೋಟ್ ಬರೆದುಕೊಟ್ಟಿದ್ದೇನೆ. ಅದರಲ್ಲಿ 15-6-1972ರಿಂದ ಡಿಸೆಂಬರ್‌ವರೆಗೆ 2400ಕೇಸುಗಳನ್ನು ನಾವು ಡಿಟೆಕ್ಟ್ ಮಾಡಿದ್ದೇವೆ. ಪರ್ಮಿಟ್‌ಗಳನ್ನು ಕ್ಯಾನ್ಸಲ್ ಮಾಡಿದ್ದೇವೆ, ಪೆನಾಲ್ಟಿ ಇಂಪೋಸ್ ಮಾಡಿದ್ದೇವೆ. ಒಟ್ಟಿನಲ್ಲಿ ಮಾನ್ಯ ಸದಸ್ಯರು ಒಂದು ವಿಷಯವನ್ನು ತಿಳಿದುಕೊಳ್ಳಬೇಕಾಗಿದೆ. ಈ ಪರ್ಮಿಟ್ ವ್ಯವಹಾರ ಏನು ಇದೆಯೋ ಅದನ್ನು ನಾವು ಕಂಡುಹಿಡಿದು ಸಾಕಾಗಿದೆ. ಅನೇಕ ಡಿಸ್ಟ್ರಿಕ್ಟ್‌ನಲ್ಲಿ ಆರ್. ಟಿ. ಎ ಪರ್ಮಿಟ್ (ಸೀಸನ್) ಕೊಟ್ಟಿದ್ದಾರೆ. ಪಕ್ಕಾ ಪರ್ಮಿಟ್ ಕೊಟ್ಟಿದ್ದಾರೆ. 3-5 ವರ್ಷದ ಪರ್ಮಿಟ್ ಅನ್ನು ಕೊಡುವ ಅಧಿಕಾರ ಅವರಿಗೆ ಇದೆ. ನಾವು ಅದನ್ನು ಕಂಡುಹಿಡಿದು ತಡೆಗಟ್ಟುವ ಹಾಗಿಲ್ಲ. ಅವರಿಗೆ ಪರ್ಮಿಟ್ಸ್ ಅನ್ನು ಕೊಡಬೇಡಿ ಎಂದು ಹೇಳುವ ಅಧಿಕಾರ ನಮಗಿಲ್ಲ. ಅದಕ್ಕೆ ನಾವು ಒಂದು ಅಮೆಂಡ್‌ಮೆಂಟ್ ಈ ಸದನದಲ್ಲಿ ಈ ಅಧಿವೇಶನ ಮುಗಿಯುವುದರೊಳಗೆ ತೆಗೆದುಕೊಂಡು ಬರಬೇಕು ಎಂದು ಇದ್ದೇನೆ. ಇಂಥ ಒಂದು ಅಮೆಂಡ್‌ಮೆಂಟ್ ಅನ್ನು ತೆಗೆದುಕೊಂಡು ಬಂದರೆ, ನಾವು ಆರ್. ಟಿ. ಎ ಮತ್ತು ಎಸ್.

(ಶ್ರೀ ಅಜೀಜ್ ಸೇಟ್)

ಟಿ. ಎ. ಗಳನ್ನು ಸ್ವಲ್ಪ ಕಂಟ್ರೋಲ್ ಮಾಡಬಹುದು ಎಂದು ಹೇಳುತ್ತಿದ್ದೇನೆ. ಈಗ ಎರಡು ಸ್ಕ್ವಾಡ್ಸ್ ಇಟ್ಟಿದ್ದೇವೆ, ಇನ್ನೂ ಮೂರು ಸ್ಕ್ವಾಡ್ ಜಾಸ್ತಿ ಮಾಡಿದ್ದೇವೆ. ಎಷ್ಟೆಷ್ಟು ಕೇಸು ಗಳನ್ನು ಹಿಡಿದಿದ್ದೇವೆ ಎಂದು ವಿವರಗಳನ್ನು ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಕಂಟ್ರ್ಯಾಕ್ಟ್ ಕ್ಯಾರೇಜಸ್ ಬಗ್ಗೆ ಉತ್ತರ ಕೊಟ್ಟಿದ್ದೀರಿ. ನಮ್ಮ ರಾಜ್ಯದಲ್ಲಿ ಲಕ್ಷುರಿ ಬಸ್ಸುಗಳು ಎಷ್ಟು ಚೆನ್ನಾಗಿವೆಯೋ ಅಷ್ಟೇ ಅಲಂಕಾರವಾಗಿ ಕಂಟ್ರ್ಯಾಕ್ಟ್ ಬಸ್ಸುಗಳು ಇವೆ. ಇವತ್ತಿನದಿವಸ ಅವರು ಕಡಿಮೆ ರೇಟಿನಲ್ಲಿ ಜನರನ್ನು ತುಂಬಿಸಿ ಕೊಂಡು ಹೋಗುತ್ತಾ ಇರುವುದು, ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ಬೇರೆಯವರು ಹೋಗಕೂಡದು ಅಂಥ ಕಡೆಗಳಲ್ಲಿಯೂ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳು ಹೋಗುತ್ತಾ ಇರುವುದು ಗಮನಕ್ಕೆ ಬಂದಿರು ವುದರಿಂದ, ಎಂ. ಎಸ್. ಆರ್ ಟಿ. ಸಿ. ಗೆ ನಷ್ಟ ಆಗುತ್ತಾ ಇರುವುದರಿಂದ ಎಲ್ಲಾ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳನ್ನು ಸರ್ಕಾರವೇ ತೆಗೆದುಕೊಂಡು, ನಡೆಸುವ ಧೋರಣೆ ಇದೆಯೇ?

ಶ್ರೀ ಅಜೀಜ್ ಸೇಟ್.—ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳು ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ಓಡಾಡುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರ ಗಮನಕ್ಕೆ ನಾನು ಒಂದು ವಿಚಾರವನ್ನು ತರಬೇಕಾಗಿದೆ ಏನೆಂದರೆ, ಈ ಕಂಟ್ರ್ಯಾಕ್ಟ್ ಕ್ಯಾರೇಜಸ್ ಏನು ಇವೆಯೋ, ಇವು ಯಾವ ದಿಕ್ಕಿನಲ್ಲಿ, ಯಾವ ರೂಟಿನಲ್ಲಿ, ಯಾವ ಟೈಮ್ ಹೋಗಬೇಕು ಎನ್ನುವುದು ಏನೂ ಇಲ್ಲ. ಮೋಟಾರ್ ವೆಹಿಕಲ್ಸ್ ಆಕ್ಟ್ ಏನು ಇದೆ ಅದು ಸೆಂಟ್ರಲ್ ಆಕ್ಟ್ ನ್ಯಾಷನಲೈಸ್ ಮಾಡುವ ವಿಷಯದಲ್ಲಿ ನಮ್ಮ ಅಭಿಪ್ರಾಯ ಏನೆಂದರೆ, ಈ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳು ಏನು ಇವೆ ಇವನ್ನು ಎಂ. ಎಸ್. ಆರ್. ಟಿ. ಸಿ. ಯವರಾಗಲಿ, ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ನವರಾಗಲೀ ಒಂದು ಕಾಂಪ್ರಹೆನ್ಸೀವ್ ಸ್ಕೀಂ ಮಾಡಿ ತೆಗೆದುಕೊಳ್ಳುವ ಹಾಗಿದ್ದರೆ ಅದಕ್ಕೆ ನಾನು ಮೊದಲು ತಲೆ ಬಾಗುತ್ತೇನೆ. ಕಂಟ್ರ್ಯಾಕ್ಟ್ ಕ್ಯಾರೇಜಸ್ ಇಂದ ಎಂ. ಎಸ್. ಆರ್. ಟಿ. ಸಿ. ಗೆ ಸಾಕಷ್ಟು ನಷ್ಟವಾಗುತ್ತಾ ಇದೆ. ನಷ್ಟವಾಗುತ್ತಾ ಇಲ್ಲ ಎಂದು ನಾನು ಹೇಳಲಿಲ್ಲ. ಇದರ ಜೊತೆಗೆ ಇಂಟರ್ ಸ್ಟೇಟ್ ಪರ್ಮಿಟ್ಸ್ ಅನ್ನು ನ್ಯಾಷನಲೈಸ್ ಮಾಡಬೇಕು ಎಂದು ಹೇಳಿ, ಒಂದು ಕಾಂಪ್ರಹೆನ್ಸೀವ್ ಸ್ಕೀಂ ಕಳುಹಿಸಿ ಎಂದು ಹೇಳಿದ್ದೇವೆ. ಹೇಗೆ ಪ್ರೈವೇಟ್ ಆಪರೇಟರ್ಸ್ ಪರ್ಮಿಟ್ ತೆಗೆದುಕೊಳ್ಳುತ್ತಾರೋ, ಹೇಗೆ ಅಪ್ಲಿಕೇಷನ್ ಹಾಕುತ್ತಾರೋ ಅದೇ ರೀತಿ ಎಂ. ಎಸ್ ಆರ್. ಟಿ. ಸಿ. ಯವರು ಅಪ್ಲೈ ಮಾಡಬೇಕು. ಮಾನ್ಯ ಸದಸ್ಯರು ಈ ಎಲ್ಲಾ ವಿಷಯಗಳನ್ನು ಕೇಳುವುದಕ್ಕೆ ಮೊದಲು ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಅವರು ಮೋಟಾರ್ ವೆಹಿಕಲ್ಸ್ ಆಕ್ಟನ್ನು ಸ್ವಲ್ಪ ಅಭ್ಯಾಸ ಮಾಡಿ, ತಿಳಿದುಕೊಂಡು ಹೇಳಲಿ. ನಾನು ಸಹಾಯ ಮಾಡುವ ಹಾಗಿ ದ್ದರೆ, ನನ್ನ ಕಡೆಯಿಂದ ಸಹಾಯ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ, ಯಾವುದೋ ಒಂದು ವಿಷಯದಲ್ಲಿ ತಾವು ಈ ರೀತಿಯಾಗಿ ಹೇಳುತ್ತಾ ಇದ್ದೀರಿ. ಇದರಿಂದ ನ್ಯಾಷನಲೈಸ್ ಮಾಡುವುದಕ್ಕೆ ಅಡ್ಡಿ ಆತಂಕಗಳು ಬರುವಂಥ ಸಂದರ್ಭ ಹುಟ್ಟುತ್ತದೆ. ನಾನು ಇದ್ದ ವಿಷಯವನ್ನು ಇದ್ದ ಹಾಗೆ ಇಡುತ್ತೇನೆ. ನಿಮ್ಮ ಮನಸ್ಸಿನಲ್ಲಿ ಏನು ಇದೆ ಅದನ್ನು ಹೇಳುವುದಕ್ಕೆ ಬರುವುದಿಲ್ಲ. ನ್ಯಾಷನಲೈಸ್ ಮಾಡಬೇಕಾದರೆ, if the house so desire I am prepared to have a Bill to take not only the permits but also the private vehicles. I am awaiting for an opportunity to see to it. In Madras the Minister for Transport, I am told, is contemplating to bring such a Bill. I have already discussed with him. I have told him to send a copy of the Bill immediately after it is introduced, so that we can also examine. This is not the worry of my own. Even in the Conference of Transport Ministers and Transport Commissioners at Coimbatore, I suggested certain amendments to Security Act, which is a Central Act, and the Conference have sent certain recommendations. The Government of India has to do much in the matter. I can bring law and overcome the shortage of chassis by paying compensation as per technical opinion.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಹೇಳುವಾಗ ಆರ್.ಟಿ.ಎ. ಮತ್ತು ಎಸ್.ಟಿ.ಎ. ಗಳನ್ನು ಇಂಡಿಪೆಂಡೆಂಟ್ ಆಗಿ ಬಿಟ್ಟಿದ್ದೇವೆ, ನಿರ್ಣಯ ತೆಗೆದುಕೊಳ್ಳುವಾಗ ನಾವು ಯಾವುದೇ ತರಹ ಒತ್ತಡ ತರುವುದಕ್ಕೆ ಆಗುವುದಿಲ್ಲ, ಕಂಟ್ರ್ಯಾಕ್ಟ್ ಕ್ಯಾರೇಜಸ್ ಬಗ್ಗೆ ಎಲ್ಲಾ ಸದಸ್ಯರಿಗೆ

ವಿವರಣೆಯನ್ನು ಒದಗಿಸಿದ್ದೇವೆ ಎಂದು ಹೇಳಿದರು. ಒಂದು ವಿವರಣೆಯನ್ನು ಕೊಡುವುದಕ್ಕೆ ಸಾಧ್ಯವಿದ್ದರೆ, ಮಂತ್ರಿಗಳು ಕೊಟ್ಟರೆ, ನಾವು ಒಂದು ನಿರ್ಣಯಕ್ಕೆ ಬರುವುದು ಸಾಧ್ಯ, ಏನೆಂದರೆ 1971-72ರಲ್ಲಿ ಎಷ್ಟು ಕಂಟ್ರಾಕ್ಟ್ ಕ್ಯಾರೇಜಸ್‌ಗಳಿಗೆ ಆರ್. ಟಿ. ಎ. ಮತ್ತು ಎಸ್. ಟಿ. ಎ. ಅವರು ಪರ್ಮಿಟ್ಸ್ ಕೊಟ್ಟಿದ್ದಾರ; 1972-73ರಲ್ಲಿ ಎಷ್ಟು ಪರ್ಮಿಟ್ಸ್ ಕೊಟ್ಟಿದ್ದಾರೆ? ಈ ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವೇ?

2-30 P. M

ಶ್ರೀ ಅಜೀಜ್ ಸೇಟ್.—ಮೊನ್ನೆ ಮಾನ್ಯ ವಿರೋಧಪಕ್ಷದ ನಾಯಕರು what is achieved by the Government of Mysore is giving permits to contract carriages ಎಂದು ಹೇಳಿದರು. ಕೂಡಲೇ ನಾನು I have asked the Home Secretary to get me details as to how many permanent contracts and temporary contracts have been issued by each RTA/RTO in the State of Mysore ಎಂದು ಹೇಳಿದ್ದೇನೆ. ಅದು ಬಂದ ತಕ್ಷಣ ಸ್ಟೇಟ್‌ಮೆಂಟ್ ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ತಯಾರಿದ್ದೇನೆ. ಇನ್ನು ಒಂದು ವಿಷಯ ಏನು ಎಂದರೆ ನಾನು ಹೇಳುವುದನ್ನು ತೆಗೆದುಕೊಳ್ಳುವುದು ಬೇಡ. ಅದು semi-quasi judicial body ಆದ್ದರಿಂದ ದಯವಿಟ್ಟು ಮೋಟಾರ್ ವೆಹಿಕಲ್ ಆಕ್ಟ್ ಅಭ್ಯಾಸ ಮಾಡಿಕೊಂಡು ಆನಂತರ ನನ್ನ ಮೇಲೆ ಏನು ಬೇಕಾದರೂ ಅಬ್ಜೆಕ್ಷನ್ ಹೇಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಂತ್ರಿಗಳು ಹೇಳಿದ ಪ್ರಕಾರ ಮೋಟಾರ್ ವೆಹಿಕಲ್ಸ್ ಆಕ್ಟ್ ತಿದ್ದುಪಡಿ ತರಬೇಕೆಂದು ಮನಸ್ಸು ಇದೆ ಆದರೆ ಏನೋ ತೊಂದರೆಗಳು ಇದೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ವಿರೋಧಪಕ್ಷದ ವತಿಯಿಂದ ಯಾವ ತೊಂದರೆಯನ್ನು ವ್ಯಕ್ತಪಡಿಸಿಲ್ಲ. ಮತ್ತು ಯಾರೂ ಅದನ್ನು ತರಬಾರದು ಎಂದು ಹೇಳಲಿಲ್ಲ. ಅವರಿಗೆ ತರತಕ್ಕ ಧೈರ್ಯ ಇದ್ದರೆ ನಾಳೆ ತರಲಿ. ನಾವು ವಿರೋಧಪಕ್ಷದ ಸದಸ್ಯರು ತರಬಾರದ ರೀತಿಯಲ್ಲಿ ತಡೆ ಹಿಡಿದಿದ್ದೇವೆ ಎನ್ನುವ ಹಾಗೆ ಮೋಟಾರ್ ವೆಹಿಕಲ್ಸ್ ಆಕ್ಸ್ ಸ್ಟಡಿ ಮಾಡಿ ಎಂದು ಹೇಳುತ್ತಾರೆ. ನಿಮಗೆ ಜವಾಬ್ದಾರಿ ಕೊಟ್ಟಿದ್ದೇವೆ, ನೀವು ಮಂತ್ರಿಗಳು ನಾಳೆ ತನ್ನಿ ಸದನ ಏನು ತೀರ್ಮಾನ ಕೊಡುತ್ತದೆ ಆ ತೀರ್ಮಾನಕ್ಕೆ ಭಾಗಿಯಾಗಿ.

ಶ್ರೀ ಅಜೀಜ್ ಸೇಟ್.—ನಾನು ಯಾವ ಭಾಷೆಯಲ್ಲಿ ಹೇಳಿದೆನೋ ಅದು ನನಗೆ ಅರ್ಥವಾಗಿದೆ. ಮಾನ್ಯ ಸದಸ್ಯರಿಗೆ ನಾನು ಹೇಳಿದ ಅರ್ಥ ಗೊತ್ತಾಗದೆ ಇದ್ದರೆ ಇನ್ನೊಮ್ಮೆ ಹೇಳುತ್ತೇನೆ. ಅಮೆಂಡ್‌ಮೆಂಟ್ ತರುವುದಕ್ಕೆ ಅಡ್ಡಿಯಿಲ್ಲ ಈಗ ತಾನೇ ಕಾಲ್ ಅಟೆನ್‌ಷನ್ ನೋಟೀಸಿಗೆ ಉತ್ತರ ಹೇಳುವ ಸಮಯದಲ್ಲಿ ಪ್ರತಿಯೊಂದೂ ಹೇಳಿದ್ದೇನೆ.

I want you to hear me once again as regards what I have said. "Rule 111 of the Mysore Motor Vehicles Rules, 1963 has been amended whereby (a) the Contract Carriage Operator has to carry a list in the bus indicating the passenger's name and addresses included in the contract, duly attested by the Secretary, Regional Transport Authority, (b) the bus as a whole has to be hired and that no individual seats are to be booked and (c) that no individual passenger who is not included in the contract shall be picked up or set down along the line."

This has been challenged by some of the private operators in the High Court of Mysore and they have got stay order.

"The other legislative measures which are at the final stage are local amendment of Sections 45 and 60 of the Mysore Vehicles Act." The Bill amending these sections will be introduced in the current session of this Assembly. I have not said that there is any difficulty. Before this Session I am bringing this amending Bill before this House. I am very keen to do it,

Sri H. D. DEVE GOWDA.—By the proposed amendment of that particular section, what you are now contemplating is to take away the power of the R. T. A. and give to the S. T. A. That does not solve the problem. As you put it, the S. T. A. is also a quasi body. Can you ask the S. T. A. not to issue any permit if you get that power? That is why we have come to the conclusion that after this Ministry came into power, a large number of permits for contract carriages was issued ; that is our impression. Unless you make it clear with facts and figures, that doubt will not go out of our mind. I want the number of contract carriage permits issued durding this period. You said that we should study the Act. There is no need to study the Act We know that. That Act also existed previous to this Ministry coming into power. That is not a new Act. That is an old Act. Why so many permits were not issued earlier, before you came to power and why were so many permits issued now ?

Sri AZEEZ SAIT.—Why do you ca me to that conclusion

Sri M. S. KRISHNAN.—In addition to what the hon. Member said, the Amendment which you are contemplating to bring......

MADAM SPEAKER.—When I am as king Sri Siddappa to sit down why does Sri M. S. Kristnan get up and talk. Let him sit down.

ಶ್ರೀ ಎಚ್. ಎಸ್. ಸಿದ್ದಪ್ಪ.—ಎಸ್. ಟಿ. ಎ. ಮತ್ತು ಆರ್. ಟಿ. ಎ. ನಲ್ಲಿ ನಿಮ್ಮ ಸರ್ಕಾರದ ಅಧಿಕಾರಿಗಳು ಇದ್ದಾರೆ. ನೀವು ಅಮೆಂಡ್‌ಮೆಂಟ್ ತರುವುದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಎಸ್. ಟಿ. ಎ. ಮತ್ತು ಆರ್. ಟಿ. ಎ. ನಲ್ಲಿ ನಿಮ್ಮ ಪಕ್ಷದ ಸದಸ್ಯರು ಇದ್ದಾರೆ. ಅವರಿಗೆ ಹೀಗೆ ಮಾಡಬೇಡಿ ಎಂದು ಹೇಳುವ ಚೈತನ್ಯ ನಿಮಗೆ ಇಲ್ಲವೇ ! ನೀವು ಹೇಳಿದರೆ ಜಿಲ್ಲಾಧಿಕಾರಿಗಳು ಮತ್ತು ಆರ್. ಟಿ. ಓ. ನಿಮ್ಮ ಮಾತು ಕೇಳುವುದಿಲ್ಲವೇ ? ನೀವು ಏತಕ್ಕೆ ಹೇಳಬಾರದು ! ಎಸ್. ಟಿ. ಎ. ಮತ್ತು ಆರ್. ಟಿ. ಓ. ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ದೇವಸ್ಥಾನ ಕಟ್ಟಿಸುವುದಕ್ಕೆ, ಮದುವೆ ಮಾಡುವುದಕ್ಕೆ ಹಣ ತೆಗೆದುಕೊಂಡು ಒಂದೊಂದು ಪರ್ಮಿಟ್ ಕೊಡುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ ! ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೇ ? ತೆಗೆದುಕೊಳ್ಳದೆ ಹೋದರೆ ನೀವು ಅದರಲ್ಲಿ ಭಾಗಿ ಆಗುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಎಸ್. ಟಿ. ಎ. ಮತ್ತು ಆರ್. ಟಿ. ಎ. ನಲ್ಲಿ ನಡೆಯುತ್ತಾ ಇರುವ ಲಂಚಗುಳಿತನದ ಹಾವಳಿ ಬೇರೆ ವಿಷಯ. ನೀವು ಯೋಚನೆ ಮಾಡುವ ತಿದ್ದುಪಡಿ ಏನು ಇದೆ ಆ ತಿದ್ದುಪಡಿಯಿಂದ ಮೂಲಭೂತವಾದ ತೊಂದರೆಗಳು ತಪ್ಪುವುದಿಲ್ಲ ಎಂದು ನಾವು ಅಭಿಪ್ರಾಯಕ್ಕೆ ಬರಬಹುದೇ ! ಮೂಲಭೂತವಾಗಿ ಕಾಂಟ್ರಾಕ್ಟ್ ಕ್ಯಾರೇಜಸ್ ತೆಗೆದು ಹಾಕುವುದಕ್ಕೆ ಬಿಲ್ಲು ತರುವುದಕ್ಕೆ ತಯಾರಿದ್ದೀರಾ ? ಈ ತರಹ ಬಿಲ್ ಯಾತಕ್ಕೆ ತೆಗೆದುಕೊಂಡು ಬರಬೇಕು ! ಹುಟ್ಟಾಪಟ್ಟೆ ಅಮೆಂಡ್‌ಮೆಂಟ್ ಏತಕ್ಕೆ ತೆಗೆದುಕೊಂಡು ಬರಬೇಕು ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮೋಟಾರ್ ವೆಹಿಕಲ್ಸ್ ಆಕ್ಟ್ ಸೆಂಟ್ರಲ್ ಆಕ್ಟ್ ಎಂದು ಉತ್ತರ ಕೊಟ್ಟಿದ್ದೀರಾ. ಅದೇ ಮಾತನ್ನು ಕೂಡ ಈಗಿನ ಮಂತ್ರಿಗಳು ಹೇಳುತ್ತಾ ಇದ್ದೀರಿ. ಸೆಂಟ್ರಲ್ ಆಕ್ಟ್ ಪ್ರಕಾರ ಪರ್ಮಿಟ್ ಕೊಡುವುದನ್ನು ಖಂಡಿತ ನಿಮಗೆ ನಿಲ್ಲಿಸುವುದಕ್ಕೆ ಉದ್ದೇಶ್ಯವಿಲ್ಲ. ಯಾವ ಯಾವ ವಿಧದಲ್ಲಿ ಯಾರು ಯಾರಿಗೆ ಅವರ ಪಕ್ಷದ ಉದ್ದೇಶ್ಯದಿಂದ ಕೊಡುತ್ತಾರೋ ಅವರ ಮೇಲೆ ನೀವು ಅಧಿಕಾರ ಮಾಡುವ ಹಾಗಿಲ್ಲ. ಕೇಂದ್ರ ಸರ್ಕಾರದ ಆಕ್ಟ್ ತಿದ್ದುಪಡಿ ಮಾಡಬೇಕು ಎಂದು ಹೇಳಬಹುದು. ಅಲ್ಲಿರತಕ್ಕ ಅಧಿಕಾರ ಇಲ್ಲಿಗೆ ಕೊಟ್ಟರೆ ಏನು ಪ್ರಯೋಜನವಿಲ್ಲ, ನಮ್ಮ ಮೂಲ ಉದ್ದೇಶ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಇದಕ್ಕೆ ಅವಕಾಶ ಇಲ್ಲದ ಹಾಗೆ ಮಾಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು. - ಇದು ಏನು ಭಾಷಣ ಮಾಡುತ್ತಿದ್ದೀರಿ ಕಾನೂನು ಪ್ರಕಾರ ಕಾಲಿಂಗ ಅಟೆನ್‌ಷನ್ ನೋಟೀಸ್ ಮೇಲೆ 2-3 ಕ್ಲಾರಿಫಿಕೇಷನ್ಸ್ ?ಬಹುದು. ಮೀರಿದರೆ 4-5 ಕೇಳ್ತ

ಬಹುದು. ಅದುಬಿಟ್ಟು 25 ಕ್ಲಾರಿಫಿಕೇಷನ್ಸ್ ಕೇಳಿದರೆ ಹೇಗೆ ? ಇದಕ್ಕೆ ಕಾಲಿಂಗ್ ಅಟೆನ್ಷನ್ ಎಂದು ಹೆಸರೇ ?

ಶ್ರೀ ಎಚ್. ಡಿ. ದೇವೇಗೌಡ.—ಇದು ನಮ್ಮ ಗ್ರಹಚಾರ. ರೂಲ್ 59ರ ಕೆಳಗೆ ಚರ್ಚೆ ಮಾಡಬೇಕು, ಮಾಡುವುದಕ್ಕೆ ಆಗುವುದಕ್ಕೆ ಆಗುವುದಿಲ್ಲ. 49ರ ಕೆಳಗೆ ಎರಡೂವರೆ ಗಂಟೆ ಚರ್ಚೆ ಮಾಡಬಹುದು, ಅದಕ್ಕೆ ಅಪ್ಪಣೆ ಕೊಡುವುದಿಲ್ಲ. ಆಗ ನಾವು ಏನು ಮಾಡಬೇಕಾಗುತ್ತದೆ ! ಇಂಥಾ ಗಹನವಾದ ವಿಷಯದ ಬಗ್ಗೆ ಚರ್ಚೆಯಾಗುತ್ತದೆ. ಇದಕ್ಕೆ ಉತ್ತರ ಬರುವ ಸನ್ನಿವೇಶ ಇಲ್ಲ ಎಂದು ತಿಳಿದುಕೊಂಡು ಔಟ್ ಆಫ್ ವೇ ಹೋಗುತ್ತೇವೆ. ಹೆಚ್ಚು ಕ್ಲಾರಿಫಿಕೇಷನ್ಸ್ ಕೇಳು ವುದಕ್ಕೆ ಅವಕಾಶವಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ 30 ಕೋಟಿ ರೂಪಾಯಿ ಬಂಡವಾಳ ಹೂಡಿದಂತಹ ಈ ಸಂಸ್ಥೆ ಪರಿಸ್ಥಿತಿ ಏನು ಎಂದು ಯೋಚನೆ ಮಾಡಬೇಕು.

ಅಧ್ಯಕ್ಷರು.—ಅದರ ಡಿಮ್ಯಾಂಡ್ ಬರುತ್ತದೆ. ನೀವೇ ಹೀಗೆ ಮಾತನಾಡಿದರೆ ಹೇಗೆ ಆಗುತ್ತದೆ? ಅದರ ಡಿಮ್ಯಾಂಡ್ ಚರ್ಚೆಮಾಡುವ ಕಾಲದಲ್ಲಿ ಇದರ ಮೇಲೆ ಮಾತನಾಡುವುದಕ್ಕೆ ಅವಕಾಶ ಇದ್ದರೂ ಕೂಡ ನಮ್ಮ ಗ್ರಹಚಾರ ಹೀಗಾಗಿದೆಯೆಂದು ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಜನರಲ್ ಡಿಸ್ಕಷನ್‌ನಲ್ಲಿ ನಾವು ಏನು ಒಂದು ಮಾತ ನಾಡಿದರೂ ಜನರಲ್ ಆಗಿ ಉತ್ತರ ಕೊಡುತ್ತಾರೆ !

ಶ್ರೀ ಎಚ್. ಎಸ್. ಸಿದ್ದಪ್ಪ.—ಡಿಮ್ಯಾಂಡ್ಸ್ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಇರುವು ದಿಲ್ಲ. ಸುಮ್ಮನೆ ಯಾರೋ ಬರೆದುಕೊಳ್ಳುವುದು, ಮನಸ್ಸಿಗೆ ಬಂದ ಹಾಗೆ ಹೇಳುವುದು, ಈ ರೀತಿ ಆಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಹೋದ ವರ್ಷ ಇದರ ಬಗ್ಗೆ ಚರ್ಚೆಯಾಯಿತು. ಯಾವ ವಿಧವಾದ ಗಮನವನ್ನೂ ಮಾನ್ಯ ಸಚಿವರು ಕೊಟ್ಟಿಲ್ಲ. ಅವರು ಮಂತ್ರಿಗಳಾದ ಮೇಲೆ ಪ್ರೈವೇಟ್ ಕ್ಯಾರೇಜಸ್ ನೂರಾರು ಹೆಚ್ಚಾಗಿವೆ. ಆದ್ದರಿಂದ ಇದಕ್ಕೆ ಅವರೇ ಜವಾಬ್ದಾರಿಯಿಂದ ಹೇಳ ಬೇಕಾಗಿ ಬರುತ್ತದೆ. ಅವರು ಮಂತ್ರಿಗಳಾದ ಮೇಲೆ ಇಷ್ಟು ಹೆಚ್ಚಾಗುವುದಕ್ಕೆ ಕಾರಣವೇನು ?

Sri AZEEZ SAIT.—I take strong objection. If my Hon'ble friend has information that I have issued permits, let him put it in writing and give it to the Speaker which are the buses for which I have given permit.

ಶ್ರೀ ಕೆ. ಎಚ್. ಹನುಮೇಗೌಡ.—ಹಿಂದಿನ ಮಂತ್ರಿಮಂಡಲವಿದ್ದಾಗ ಇದ್ದುದಕ್ಕಿಂತ ಹೆಚ್ಚಾಗಿ ನೂರಾರು ಪ್ರೈವೇಟ್ ಕ್ಯಾರೇಜ್ ಬಸ್ಸುಗಳಿಗೆ ಪರ್ಮಿಟ್‌ಗಳನ್ನು ಕೊಡಬೇಕಾದರೆ ಅದಕ್ಕೆ ಕಾರಣವೇನು ?

ಎರಡನೆಯದಾಗಿ ಪ್ರೈವೇಟ್ ಕ್ಯಾರೇಜುಗಳು ರೋಡ್ ಟ್ರಾನ್ಸ್‌ಪೋರ್ಟ್ ಲಕ್ಷುರಿ ಬಸ್ಸುಗಳಿ ಗಿಂತ ಹೆಚ್ಚು ಅನುಕೂಲ ಕೊಟ್ಟು, ಕಡಿಮೆ ರೇಟಿನಲ್ಲಿ ಪ್ರಯಾಣಿಕರನ್ನು ಒಯ್ಯುತ್ತ ಬಸ್ಸು ಗಳನ್ನು ಓಡಿಸಿ ಲಕ್ಷಾಂತರ ರೂಪಾಯಿ ಫಾಯಿದೆ ಮಾಡುತ್ತ ಇರಬೇಕಾದರೆ ಸರ್ಕಾರಿ ಬಸ್ಸುಗಳಲ್ಲಿ ನಷ್ಟವಾಗುವುದಕ್ಕೆ ಕಾರಣವೇನು ? ಇದಕ್ಕೆಲ್ಲ ಜವಾಬ್ದಾರರು ಸಂಬಂಧಪಟ್ಟ ಮಂತ್ರಿಗಳು ಆಗ ಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಬರೆದು ಕೊಡಬೇಕೆಂದು ಚಾಲೆಂಜ್ ತೆಗೆದುಕೊಂಡರು. ಎಸ್. ಟಿ. ಎ. ಗೆ ಸ್ವತಂತ್ರವಾದ ಕೆಲವು ನಿಯಮಗಳಿದ್ದರೂ ಕೂಡ ಟ್ರಾನ್ಸ್ ಪೋರ್ಟ್ ಕಮೀಷನರನ್ನು ಮೂರು ಮೂರು ತಿಂಗಳಿಗೆ ವರ್ಗ ಮಾಡಿರುವ ಪ್ರಸಂಗಗಳಿವೆ. ಮಂತ್ರಿಗಳ ಆಜ್ಞೆಯಂತೆ ನಡೆಯದೆ ಹೋದರೆ ಮೂರು ಮೂರು ತಿಂಗಳಿಗೇ ವರ್ಗ ಮಾಡು ತ್ತಾರೆ.

Sri AZEEZ SAIT.—You please substantiate your charge.

Sri H. D. DEVE GOWDA.—What made you transfer the Transport Commissioner within three months ? Is that the way to run the administration ? what shall we call it ?

ಶ್ರೀ ವಾಟಾಳ್ ನಾಗರಾಜ್.—ಆರೋಪ ಮಾಡುತ್ತಿರುವಾಗ ಸಚಿವರು ಸಾವಧಾನದಿಂದ ಕೇಳಬೇಕು. ಅದನ್ನು ಬಿಟ್ಟು ಗರಡಿ ಮನೆಯಲ್ಲಿ ಮಾಡುವಂತೆ ಮಾಡಬಹುದೇ ? ನಮ್ಮಲ್ಲಿರುವ ಸಮಾಚಾರವನ್ನು ಹೇಳುತ್ತಿದ್ದೇವೆ. ಅವನ್ನು ತಿಳಿದು ಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—'ಬೇಲಿ ಎದ್ದು ಹೊಲ ಮೇಯಿತು' ಎನ್ನುವ ಹಾಗೆ ಆಗಿದೆ. ಜವಾಬ್ದಾರಿ ಇರುವವರು ಹೀಗೆ ಮಾತನಾಡುವುದು ಉಚಿತವೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಗಾಜಿನ ಮನೆಯಲ್ಲಿ ವಾಸ ಮಾಡುತ್ತಿರುವ ಮಂತ್ರಿಗಳು ಇಷ್ಟು ಸೂಕ್ಷ್ಮವಾದರೆ ಬಂಡೆ ಮನೆಯಲ್ಲಿ ವಾಸಮಾಡುತ್ತಿರುವ ಜನ ಏನು ಮಾಡಬೇಕು ?

Sri H. M. CHANNABASAPPA (Minister for Public Works and Electricity).—I am on a point of order Madam Speaker and it is only this : This house will be able to hear and also appreciate the discussion if one member speaks at a time If half a-dozen members begin to speak simultaneously, it would be difficult for Government and Members on this side of the House to follow what is going on. Therefore, I would submit that it is not in order for half-a-dozen members to get up and speak.

ಅಧ್ಯಕ್ಷರು.—ಏನು ನಡೆಯುತ್ತಿದೆ ಎಂದು ನನಗೂ ಅರ್ಥವಾಗುವುದಿಲ್ಲ. ದಯಮಾಡಿ ಒಬ್ಬೊಬ್ಬರೇ ಮಾತನಾಡಿದರೆ ಒಳ್ಳೆಯದು. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್, ಕೋಣಂದೂರು ಲಿಂಗಪ್ಪ, ದೇವೇಗೌಡ, ಆರ್ಮುಗಂ ಹೀಗೆ ಎಲ್ಲರಿಗೂ ಉತ್ಸಾಹ ಒಟ್ಟಿಗೇ ಬಂದರೆ ಹೇಗೆ ?

Sri C M. ARUMUGHAM.—Madam Speaker, I want to bring this point to your kind notice. In the House it is a debate. When we make a debate, could it be right on the part of the Minister concerned to throw a challenge against the Member. The debate in the House as the Hon. Minister knows is something like a debate in the Court when you argue the case. There is no challenge. I am asking the Speaker whether the Minister can throw the challenge.

Sri K. PUTTASWAMY.—If a member can throw a challenge, a Minister also can throw the challenge.

MADAM SPEAKER.—Challenges were on both sides. It is not allowed for anybody.

Sri C. M. ARUMUGHAM.—Secondly, it may be possible for a Member to get up and say so many things. But a Minister cannot say what he wants to say. He has to speak on behalf of the Government ; it is not shouting.

MADAM SPEAKER.—Even members have their own responsibility.

Sri C. M. ARUMUGHAM.—I want the Speaker to give a ruling. Is it in the same way as a member can speak, the Minister also can speak and behave ? I want a ruling.

MADAM SPEAKER.—Both have their own responsibility. They have to behave according to rules. Now let us attend to some business. Let other members also have their chance.

C. M. ARUMUGHAM.—Madam Speaker, I submit I wish to know whether Members and Ministers are equal so far as responsibility is concerned ? Because our Rules of Procedure makes a lot of

difference between these two. For instance, a Minister can bring a Bill at any time he likes. Whereas a Member, if he wants to bring a private Member's Bill, he requires about fifteen days notice. He has to get the consent of the Speaker, consent of the Governor—and so many things. That difference is made in order to make the Minister more responsible.

MADAM SPEAKER.—Those things are necessary for the Government also. The Rules are the same.

Sri C. M. ARUMUGHAM.—The Minister can make a statement whenever he wants. A member cannot. The Rules make a distinction between a Member and Minister. Likewise, responsibility also is there. Madam Speaker, I can speak and get away. Is it possible for a Minister in charge of a subject to absent himself like that ? There is a certain fixed responsibility for the Minister.

MADAM SPEAKER.—That is quite correct. You both act according to that. No body denies. They have their responsibility. Members have their responsibility.

ಶ್ರೀ ಸಿ. ಬೈರೇಗೌಡ.—ಇದನ್ನು ಕಾನೂನು ರೀತ್ಯಾ ನಡೆಸುವುದು ಒಂದು ಭಾಗ ಇದೆ. ಇನ್ನೊಂದು ಭಾಗ ಏನು ಎಂದರೆ ಎಸ್. ಟಿ. ಎ. ಮತ್ತು ಆರ್. ಟಿ. ಎ. ಪರ್ಮಿಷನ್ ಇಲ್ಲದೆ ಪೋಲೀಸ್‌ನವರ ಪರ್ಮಿಷನ್ ಮೇಲೆ ಓಡಿಸುತ್ತಿದ್ದಾರೆ. ಇದನ್ನಾದರೂ ತಡೆಗಟ್ಟಲಿ ಎಂದು ಹೇಳುತ್ತೇನೆ.

Sri AZEEZ SAIT.—I have already replied to Sri Deve Gowda that I am getting all the details from all the districts and they will be furnished to members.

Coming to Sri Siddappa, he just said "ಟೆಂಪರ' ಡೊನೇಷನ್' ಎಂದು ತೆಗೆದುಕೊಂಡು ಪರ್ಮಿಷನ್ ಕೊಡುತ್ತಿದ್ದಾರೆ ಎಂದು ಹೇಳುತ್ತಾ ಇರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ? It is news to me. I have no such information. When I get details from all over the State. I will be able to check up whether it is correct or not. If it is correct, Government will consider how to deal with it. As to what Government has done, this Government after coming into power has enchanced the tax on contract carriage from Rs. 35 to Rs. 100. I do concede that out of 399 contract carriage permits issued I do not know how many were issued in this region and how many in the other regions. Definitely pucca permits were issued during the Governor's regime. Another thing is that they do not want either decentralisation or centralisation. Then what is it that they want actually, I do not know. Even before they asked me to move the Centre, the South Zone Ministers of Transport have already moved the Government of India and we have brought this matter to the notice of the Transport Ministers' Conference also wherein we have asked for amending certain sections of the Central Act. My friends should know that the M.S.R.T.C. is not a losing concern, and it is giving 6 per cent return to Government. Over and above that we have paid tax also. I do concede that there is scope for it to grow but all of a sudden I cannot notionalise all the routes for the simple reason that M.S.R.T.C. has to draw

(Sri Azeez Sait)

up a scheme; that scheme has to be approved by the Government, it has then to be notified and the Chief Minister has to hear the objections For the information of the hon. Member Sri Deve Gowda I may say that the M.S.R.T.C. had sent a scheme for nationalising a pocket in Raichur District since a long time but the then Chief Minister Sri Veerendra Patil shelved it. It is our present Chief Minister who has taken it up and fixed up a date for hearing objections. Before he accuses the Government, he must be sure of his ground. Government is quite capable of doing things in the interest of the people, democracy and socialism and I am prepared to furnish whatever information they want. But let there be a give and take.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಬಹಳ ವೇಗದಿಂದ ಹೇಳಿದ್ದನ್ನು ನಾವು ಇಲ್ಲಿ ಕೂತುಕೊಂಡು ಕೇಳುವುದಕ್ಕೆ ತಯಾರಾಗಿಲ್ಲ. ಡೆಮಾಕ್ರಸಿ, ಯಲ್ಲಿ ಸೋಷಿಯಾಲಿಸಮ್‌ನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರಕ್ಕೆ ಎಷ್ಟು ತಾಕತ್ತು ಇದೆಯೋ, ಈ ಬಗ್ಗೆ ಹೇಳುವುದಕ್ಕೆ ಅವರಿಗೆ ಎಷ್ಟು ತಾಕತ್ತು ಇದೆಯೋ ಅಷ್ಟೇ ನಮಗೂ ಕೂಡ ತಾಕತ್ತು ಇದೆ. ಈ ಬಗ್ಗೆ ನಮಗೆ ಹೇಳುವುದಕ್ಕೂ ಕೂಡ ಅಷ್ಟೇ ಅಧಿಕಾರ ಇದೆ. ಅವರು ಈ ಬಗ್ಗೆ ಏನು ಒಂದು ಪದ ಪ್ರಯೋಗ ಮಾಡಿದ್ದಾರೆ ಎಂದರೆ...

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಇಲ್ಲಿ ಬಂದು ತಾವು ಹೇಳಿದ್ದನ್ನು ಕೇಳಿಕೊಂಡು ಕೈ ಎತ್ತುವುದಕ್ಕೆ ತಯಾರಾಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಮೊಟ್ಟ ಮೊದಲು ಅಧಿಕಾರಕ್ಕೆ ಬಂದಮೇಲೆ ಎಷ್ಟು ಪರ್ಮಿಟ್ ಕೊಟ್ಟಿದ್ದೀರಿ ಎಂದು ಕೇಳುವುದಕ್ಕೆ ನಮಗೆ ಅಧಿಕಾರ ಇದೆ. ಅವರು ಹೇಳಿದರು ಈ ಪರ್ಮಿಟ್ ಕೊಡುವುದನ್ನು ಆರ್. ಟಿ. ಓ. ಅವರಿಂದ ಕಿತ್ತು ಎಸ್. ಟಿ. ಓ.ಗೆ ಕೊಡುತ್ತೇವೆ ಎಂದು ಇದು ಒಂದು ಕ್ಯಾಸಿ ಬಾಡಿ. ನಾನು ಶ್ರೀಮಾನ್ ಹನುಮೇಗೌಡರನ್ನು ಸಮರ್ಥನೆ ಮಾಡುತ್ತೇನೆಂದಲ್ಲ ಈ ಪರ್ಮಿಟ್ ವಿಚಾರದಲ್ಲಿ ಟ್ರಾನ್ಸ್‌ಪೋರ್ಟ್ ಕಮೀಷನರರನ್ನು 2-3 ತಿಂಗಳಿಗೊಂದು ಸಾರಿ ಟ್ರಾನ್ಸ್‌ಫರ್ ಮಾಡಿರುವುದು ನನ್ನ ಅನುಭವಕ್ಕೂ ಕೂಡ ಬಂದಿದೆ.

ಶ್ರೀ ಅಜೀಜ್ ಸೇಟ್.—ನೀವೂ ಕೂಡ ಹೇಳಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ—ನಾನು ಹೇಳಲಿಲ್ಲ. ನಾನು ಅವರನ್ನು ಸಮರ್ಥನೆ ಮಾಡುತ್ತೇನೆ ಅಂತಲ್ಲಾ.

ಶ್ರೀ ಅಜೀಜ್ ಸೇಟ್.—ಅವರೂ ಕೂಡ ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ತಮ್ಮ ವಾದವನ್ನೇ ಪುಷ್ಟೀಕರಿಸಿ ವಿರೋಧ ಪಕ್ಷದವರಿಗೆ ಬುದ್ಧಿ ಹೇಳುವುದಕ್ಕೆ ಹೊರಟಿದ್ದಾರೆ. ಇದನ್ನು ಸರ್ಕಾರ people's Interest, Democracy and Socialism ನಿಂದ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನಮ್ಮ ಸಂಬಂಧಿಕರು ಯಾರೂ ಆರ್. ಟಿ. ಓ. ಅವರಿಂದ ಪರ್ಮಿಷನ್ ತೆಗೆದುಕೊಂಡು ಬಸ್ಸು ಓಡಿಸುತ್ತಾ ಇಲ್ಲ. ಈವಾಗ ಇವರು ಟ್ಯಾಕ್ಸ್ ಏನು ಜಾಸ್ತಿ ಮಾಡಿದ್ದಾರೆ ಅವನ್ನು ಪ್ಯಾಸೆಂಜರ್ಸ್ ಕೊಡುತ್ತಿದ್ದಾರೆ. ಅದನ್ನು ಬಸ್ಸಿನ ಮಾಲೀಕ ಕೊಡುತ್ತಾ ಇಲ್ಲ. ಇದನ್ನೇ ನಾವು ಒಂದು ಮಹಾ ಸಾಧನೆ ಮಾಡಿದ್ದೇವೆ ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಈ ಬಗ್ಗೆ ನಾನು ಕೆಲವು ವಿವರಣೆಗಳನ್ನು ಕೇಳಿದ್ದೇನೆ. ಅವರು ಆ ಸ್ಟೇಟ್‌ಮೆಂಟ್ ಈ ಸಭೆಯ ಮುಂದೆ ಇಟ್ಟಾದಮೇಲೆ ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಟ್ರಾನ್ಸ್‌ಫರ್ ಮಾಡುವುದಕ್ಕೆ ಕೆಲವು ವಿರೋಧಪಕ್ಷದವರೂ ಕೂಡ ಒಂದು ಹೇಳಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದನ್ನು ಯಾವ ಸಂದರ್ಭದಲ್ಲಿ ಹೇಳಿದ್ದಾರೆ. ಯಾವಾಗ ಹೇಳಿದ್ದಾರೆ ಅನ್ನುವುದನ್ನು ಈ ಸಭೆಯಲ್ಲಿ ಮುಚ್ಚಿಡದೆ ತಿಳಿಸಬೇಕು. ಇಲ್ಲದೇ ಹೋದರೆ ಬಹಳ ಅನ್ಯಾಯವಾಗುತ್ತದೆ. ಅಲ್ಲದೆ ಸುಮ್ಮನೆ ವಿರೋಧ ಪಕ್ಷದವರ ಮೇಲೆ ಈ ಒಂದು ಗೂಬೆಯನ್ನು ಕೂರಿಸುವುದಾದರೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಆದುದ

ರಿಂದ ನಾನು ಕೇಳುವುದು ಏನೆಂದರೆ ಯಾವ ಯಾವ ಸದಸ್ಯರು, ಯಾವ ಯಾವ ಪಾರ್ಟಿಯವರು ನಿಮ್ಮಲ್ಲಿಗೆ ಯಾವ ಸಂದರ್ಭದಲ್ಲಿ ಬಂದಿದ್ದರು ಎನ್ನುವುದು ಇಡೀ ಜನಕ್ಕೆ ಗೊತ್ತಾಗಲಿ, ನಾವು ಹೇಳುವುದು ಸತ್ಯವೋ, ನೀವು ಹೇಳುವುದು ಸತ್ಯವೋ ಅನ್ನುವುದು ಎಲ್ಲರಿಗೂ ಗೊತ್ತಾಗಲಿ, ಹಾಗೆ ಮಾಡದೇ ಹೋದರೆ ವಿರೋಧ ಪಕ್ಷದವರ ಮೇಲೆ ಮಸಿ ಬಳಿದಂತಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ಒಂದು ಹೇಳಿಕೆಯನ್ನು ಇಡಬೇಕು ಎಂದು ಹೇಳುತ್ತೇನೆ.

ಶ್ರೀ ಅಜೀಜ್ ಸೇಟ್.—ಈ ವಿಚಾರದಲ್ಲಿ ಅವರವರ ಮನಸ್ಸಿನಲ್ಲಿ ಅವರವರೇ ತಿಳಿದುಕೊಂಡರೆ ಸಾಕು. ನಾನು ಅವರ ಪಟ್ಟಿಯನ್ನು ಕೊಡುವುದಕ್ಕೆ ತಯಾರಾಗಿಲ್ಲ.

ಅಧ್ಯಕ್ಷರು.—ಈಗ ಶ್ರೀಮಾನ್ ದೇವೇಗೌಡರು ಈ ಬಗ್ಗೆ ಕೆಲವು ವಿವರಗಳನ್ನು ಕೇಳಿದ್ದೇನೆ. ಅವನ್ನು ಮಾನ್ಯ ಸಚಿವರು ಈ ಸಭೆಯ ಮುಂದೆ ಇಟ್ಟಾದ ಮೇಲೆ ನಾವು ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ. So, this House will get a chance to discuss it after the Minister furnished the information.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಬೇಕು. ಈ ವಿಷಯವನ್ನು ಸುಮ್ಮನೆ ಗೋಪ್ಯವಾಗಿ ಇಡಬಾರದು. ಈ ಪ್ರಶ್ನೆ ಬಹಳ ಗಂಭೀರವಾದುದ.

ಶ್ರೀ ಅಜೀಜ್ ಸೇಟ್.—ಸಂದರ್ಭ ಬಂದಾಗ ಹೇಳುತ್ತೇನೆ.

ಅಧ್ಯಕ್ಷರು.—ಹಾಗಾದರೆ ಮಂತ್ರಿಗಳು ಹೇಳುವುದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ರೂಲ್ ನಂಬರ್ 177ರ ಪ್ರಕಾರ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೇನೆ. ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ಇನ್ನೂ ಪರ್ಮಿಷನ್ ಬಂದಿಲ್ಲ.

ಶ್ರೀ ಅಜೀಜ್ ಸೇಟ್.—ಅದು ಹೇಳುವುದರಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಈ ವಿಚಾರವನ್ನು ನಿನ್ನೆಯೇ ಎತ್ತಬೇಕೆಂದಿದ್ದೆ. ಮಾನ್ಯ ಮಂತ್ರಿಗಳು ಇದನ್ನು ಅಷ್ಟು ಸುಲಭವಾಗಿ ಹಾರಿಸಬೇಡಿ. ನಾನು ಈ ವಿಚಾರದಲ್ಲಿ ಎದ್ದು ಮಾತನಾಡುವಷ್ಟರಲ್ಲೇ ಮಂತ್ರಿಗಳು ಎದ್ದು ನಿಂತುಕೊಂಡು ಅದರಿಂದ ಏನೂ ಪ್ರಯೋಜನ ಇಲ್ಲ ಎಂದು ಹೇಳಿದರೆ ಈ ವಿಷಯವನ್ನು ಅಷ್ಟರ ಮಟ್ಟಿಗೆ ಹಾರಿಸುವಂತೆ ಮಾತನಾಡುವುದನ್ನು ಬಿಡಲಿ.

NOTICE OF QUESTION OF PRIVILEGE

***re*: Statement by the Minister for Labour about exemption of the Labour Arts Provisions in respect of new Small Scale Industries**

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರಲ್ಲಿ ನಾನು ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿರುವ ಬಗ್ಗೆ ಒಂದು ನೋಟೀಸು ಕಳುಹಿಸಿದ್ದೆ. ಅದರಲ್ಲಿ ಹೇಳಿರುವ ವಿಷಯ ಮಾರ್ಚಿ 13 ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವರದಿಯಾಗಿದೆ, ಅದು ಹೀಗಿದೆ.—

> "The Labour Minister Sri Azeez Sait disclosed here today that the Government was contemplating to exempt from the purview of the Labour Act the newly started small-scale industries"

ಇದರಲ್ಲಿರುವ ಪ್ರಶ್ನೆ ಎಂದರೆ ಲೇಬರ್ ಆಕ್ಟನ್ನು ಆಗಿಂದಾಗ್ಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ಅನ್ವಯಿಸದ ಹಾಗೆ ಎಕ್ಸೆಂಪ್ಟ್ ಮಾಡಲು ಸರ್ಕಾರ ಯೋಚನೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇದೊಂದು ಮುಖ್ಯವಾದ ಧೋರಣೆ ಪ್ರಶ್ನೆ. ಲೇಬರ್ ಆಕ್ಟ್‌ಗಳು ಎಂದರೆ ಬೇಕಾದಷ್ಟು ಇವೆ, 1936 ರಲ್ಲಿ ಆಗಿರುವ ಇಂಡಸ್ಟ್ರಿಯಲ್ ಇಂಪ್ಲಿಮೆಂಟ್ಸ್ ಆಕ್ಟ್ ಇದೆ, 1946 ರಲ್ಲಿ ಆಗಿರುವ ಲೇಬರ್ ಯೂನಿಯನ್ ಆಕ್ಟ್ ಇದೆ, ಪೇಮೆಂಟ್ ಆಫ್ ವೇಜಸ್ ಆಕ್ಟ್ ಇದೆ, ಹೀಗೆ ಅನೇಕ

(ಶ್ರೀ ಎಂ. ಎಸ್. ಕೃಷ್ಣನ್)

ವಿಧವಾದ ಕಾನೂನುಗಳು ಇವೆ. ಇವೆಲ್ಲಾ ಬಹು ಮುಖ್ಯವಾದ ಸೆಂಟ್ರಲ್ ಆಕ್ಟ್‌ಗಳೇ, ಇವು ನಮ್ಮ ದೇಶದಲ್ಲಿ ಅನೇಕ ವರ್ಷಗಳಿಂದಲೂ ಜಾರಿಗೆ ಬಂದಿದೆ. ನಮ್ಮಲ್ಲಿ ಅನೇಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳೂ ಇವೆ, ಲಾರ್ಜ್ ಸ್ಕೇಲ್ ಇಂಡಸ್ಟ್ರೀಗಳೂ ಇವೆ, ಇಂತಹ ಕಾನೂನುಗಳನ್ನು ಅನ್ವಯ ಮಾಡುವಾಗ ಇದನ್ನು ಇನ್ನೂ ಕಾರ್ಮಿಕರ ಶೋಷಣೆ ಮಾಡಲು ಸರ್ಕಾರ ಯೋಚನೆ ಮಾಡುತ್ತಾರೆಯೋ ಹೇಗೇ ? ಇದನ್ನು ಮಾಡಿದರೆ ಮುಂದೆ ಕೈಗಾರಿಕೆಗಳಲ್ಲಿರುವ ಕೆಲಸಗಾರರು ಎಂಟು ಗಂಟೆಗಳ ಕೆಲಸ ಮಾಡುವುದಕ್ಕೆ ಬದಲು ರಾತ್ರಿ 12 ಗಂಟೆಯಿಂದ 16 ಗಂಟೆಗಳ ಕಾಲದಷ್ಟು ಕೆಲಸ ಮಾಡಬೇಕೇ ಇವೆಲ್ಲಾ ಧೋರಣೆ ವಿಚಾರಗಳು. ಇದರ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬೇಕಾಗಿ ಬಂದಿದೆ.

3-00 P.M.

ಅಧ್ಯಕ್ಷರು.—ಮೊದಲೇ ಒಂದು ರೂಲಿಂಗ್ ಕೊಟ್ಟಿದ್ದೇನೆಂದು ತಾವೇ ಹೇಳುತ್ತೀರಿ. ಮತ್ತೆ ತಾವು ಎಲ್ಲ ವಿಚಾರಗಳನ್ನೂ ಇಲ್ಲಿ ಹೇಳಿದ ಮೇಲೆ ನಾನು ಅದರ ಬಗ್ಗೆ ಏನು ರೂಲಿಂಗು ಕೊಡಬೇಕು ?

ಶ್ರೀ ಎಂ ಎಸ್ ಕೃಷ್ಣನ್.—ಮಾನ್ಯ ಮಂತ್ರಿಗಳು ಕಾನೂನಿಗೆ ವಿನಾಯಿತಿಗಳನ್ನು ಕೊಡಬೇಕೆಂದು ಹೇಳುವ ಸರ್ಕಾರದ ಧೋರಣೆಯನ್ನು ನಾವು ಇಲ್ಲಿ ವಿಚಾರ ಮಾಡಬೇಕಾಗುತ್ತದೆ. ಇದರಲ್ಲಿರುವುದು ಮುಕ್ಕಾಲು ಭಾಗ ಸೆಂಟ್ರಲ್ ಆಕ್ಟ್‌ಗಳೇ, ಇಂತಹ ಕಾನೂನುಗಳಿಂದ ವಿನಾಯಿತಿ ಮಾಡಬೇಕಾದರೆ ಇದೊಂದು ಭಾರಿ ಅನ್ಯಾಯವಾಗುತ್ತದೆ ಮತ್ತು ಇದರಿಂದ ಕಾರ್ಮಿಕ ವರ್ಗಕ್ಕೆ ಬಹಳ ಅನ್ಯಾಯವಾಗುತ್ತದೆ. ಇದಕ್ಕೆ ಅವಕಾಶ ಕೊಡಕೂಡದು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ.

Procedure under Rule 177 for Raising Question of Privileges

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದುವರೆಗೆ ಏನು ಹೇಳಿದರು ಎನ್ನುವುದು ಅರ್ಥವಾಗುತ್ತಿಲ್ಲ, ಯಾವುದೋ ವಿಚಾರಗಳನ್ನು ಇಲ್ಲಿ ತೆಗೆದುಕೊಂಡು ಇಷ್ಟು ದೊಡ್ಡದಾಗಿ ವಾಕ್ಯಾರ್ಥ ಮಾಡಲು ಹೊರಟರೆ ಇದರ ಬಗ್ಗೆ ಏನು ತಿಳಿದುಕೊಳ್ಳಬೇಕು ?

ಅಧ್ಯಕ್ಷರು.—ನಾನು ಮಾನ್ಯ ಕೃಷ್ಣನ್ ಅವರ ಸೂಚನೆಗೆ ಅನುಮತಿ ಕೊಟ್ಟಿಲ್ಲ. ಅನುಮತಿ ಕೊಡುವುದಕ್ಕೆ ಮೊದಲೇ ಈ ರೀತಿ ಅವರು ವಾದ ಮಾಡುತ್ತ ಹೋದರೆ ನಾವೇನು ಹೇಳುವುದು ?

ತಮಗೆ ಕಾಗದ ಬರೆಯುತ್ತೇನೆ, ಅಲ್ಲಿಯವರೆಗೂ ಇಲ್ಲಿ ತಾವೇನೂ ಹೇಳುವುದು ಬೇಡ, ತಾವು ಹೀಗೆ ಹೇಳುವುದನ್ನೆಲ್ಲಾ ಹೇಳಿ ಮುಗಿಸಿದ ಮೇಲೆ ನಾಳೆ ನಾನು ಏನು ಹೇಳಲಿಕ್ಕೂ ಉಳಿಯುವುದಿಲ್ಲ,

ಶ್ರೀ ಎಂ ಎಸ್ ಕೃಷ್ಣನ್.—ರೂಲು 177 ರ ಪ್ರಕಾರ,

"A member may, with the consent of the Speaker, raise a question involving a breach of privilage either of a member, or of the Assembly or of a Committee thereof." ಎಂದು ಇದೆ.

Rule 178 says :

"A member wishing to raise a question of privilage shall give notice in writing to the Secretary before the commencement of the sitting......"

This has been done. I take it for granted that I have the consent of the Speaker to raise the issue.

† MADAM SPEAKER —It is only the memebers presumption. Is there any consent ?

†Sri D. DEVARAJ URS.—The hon. member can explain his stand provided the hon. Speaker wants the member to explain before the question of admissibility or otherwise has to be decided by the Speaker. As I understand the Speaker just now said that she is looking into the question, whether it is to be admitted or not. Sometimes there were occasions when the Speaker used to ask a member under what provisions of law or reasonings a privilege motion sould be admitted before taking a decision. I understand the Chair has not asked the memcber to explain the position. Such being the situation, I cannot really understand why the hon. member is taking so much time of the House unnecessarily, I must say, by explaining the entire subject matter on which he wants to bring the privilege motion. The Speaker will kindly put an end to all this and proceed with the business of the House,

MADAM SPEAKER.—Yes, I have said that I will look into this–whether it is to be admitted or not.

Next introduction of Bill.

Mysore State Civil Services (Regulation of Promotion Pay and Pension) Bill 1973–Introduction

Sri D. DEVARAJ URS.—Madam, I beg to introduce the Mysore State Civil Services (Regulation of Promotion, Pay and Pension) Bill, 1973.

MADAM SPEAKER.—The Mysore State Civil Services (Regulation of Promotion, Pay and Pension) Bill, 1973 is introduced.*

Expunction of words used on 14-3-73 by Sri H. D. Devegowda and Chief Minister.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು ನಿನ್ನೆ ಇಲ್ಲಿ ಮಾತನಾಡುತ್ತ ಮನ ನೊಂದು ಕೊಂಡು ಕೆಲವು ವಿಚಾರಗಳನ್ನು ಹೇಳಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ನಾನು ಮಾತನಾಡುವಾಗ ಸ್ವಲ್ಪ ತಪ್ಪು ಮಾಡಿಕೊಂಡು ಹೇಳಿದೆನೋ ಏನೋ ಎಂದು ತಿಳಿದಿದ್ದೆ. ಹಾಗೇನಾದರೂ

* The Bill is introduced as annexues to this volume.

(ಅಧ್ಯಕ್ಷರು)

ತಪ್ಪು ಮಾಡಿ ಹೇಳಿದ್ದರೆ ಅದನ್ನು ರಿಕಾರ್ಡು ತರಿಸಿ ನೋಡುತ್ತೇನೆ ಎಂದು ಹೇಳಿದ್ದೆ. ಹಾಗೇನಾದರೂ ನಾನು ತಪ್ಪು ಮಾಡಿದ್ದರೆ ಅದನ್ನು ತಮ್ಮಗಳ ಮುಂದೆ ಹೇಳಿ ತಿದ್ದಿಕೊಳ್ಳಬಹುದು. ತಪ್ಪು ಮಾಡಿರುವವರು ಯಾರೇ ಆಗಲಿ ಅದನ್ನು ಕೆಲ ಸಂದರ್ಭಗಳಲ್ಲಿ ತಿದ್ದಿಕೊಳ್ಳಬೇಕಾಗುತ್ತದೆ. ನಾನು ಹಾಗೆ ತಪ್ಪು ಹೇಳಿದ್ದರೆ ರಿಕಾರ್ಡನ್ನು ತರಿಸಿ ನೋಡುತ್ತೇನೆಂದು ಏನು ಹೇಳಿದ್ದೆ ಅದರ ಪ್ರಕಾರ ನಮ್ಮ ರಿಕಾರ್ಡನ್ನು ಕೂಡ ತರಿಸಿ ನೋಡಿದ್ದರ ಮೇಲೆ ಅದರಲ್ಲಿ ಹೀಗೆ ಇದೆ.

''ಶ್ರೀ ದೇವರಾಜ ಅರಸಿನವರ ಮೇಲೆ ಗುಂಡನ್ನು ಹೊಡೆಯಲೂ ಬರಬಹುದು ಇಲ್ಲವೇ ಶ್ರೀ ದೇವೇಗೌಡರ ಮೇಲೆ ಚಪ್ಪಲ ಎಸೆಯಲೂ ಬರಬಹುದು.........'

ಆ ಸಂದರ್ಭದಲ್ಲಿ ಶ್ರೀ ಎಂ. ಟಿ. ರಾಮಸ್ವಾಮಿಯವರು ಮಾತನಾಡುತ್ತ ವಿರೋಧ ಪಕ್ಷದ ನಾಯಕರು 'ಜೋಡು' ಎನ್ನುವ ಪದ ಬಳಸಿದುದು ಸರಿಯಲ್ಲ ಎಂದು ಹೇಳಿದರು. ಆಗ ನಾನು ಹೀಗೆ ಹೇಳಿದೆ.

''ಅವರು ಹೇಳಿದ್ದು ಅವರಿಗೆ ಪವಿತ್ರವಾಗಿದ್ದರೆ, ಅಪ್ಯಾಯಮಾನವಾಗಿದ್ದರೆ ಅದು ಹಾಗೆಯೇ ಇದ್ದುಕೊಂಡು ಹೋಗಲಿ, ಬಿಡಿ. ನಿಮಗೇನು ಕಷ್ಟ?'

ಆಗ ವಿರೋಧ ಪಕ್ಷದ ನಾಯಕರು ನಾನು ಹೇಳಿದುದನ್ನು ಸರಿಯಾಗಿ ತಿಳಿದುಕೊಳ್ಳದೆ ಅವರು ಹೇಳಿದುದನ್ನು ತಪ್ಪಾಗಿ ಹೇಳುತ್ತಿದ್ದೇನೆಂದು ಅವರು ಆಕ್ಷೇಪಣೆ ಎತ್ತಿದರು. ನಾನು ವಿರೋಧ ಪಕ್ಷದ ನಾಯಕರಿಗೆ ಮನಸ್ಸು ನೋಯಿಸುವ ವಿಚಾರವನ್ನು ಹೇಳಲಿಲ್ಲ. ಆದುದರಿಂದ ಅವರು ತಪ್ಪು ಭಾವನೆಯಿಂದ ಏನು ಹೇಳಿದ್ದಾರೋ ಅದನ್ನು ಈ ಸಭೆಯ ನಡವಳಿಕೆಯಿಂದ ತೆಗೆದು ಹಾಕುವುದು ಉಚಿತವೇ ಹೊರತು ಬೇರೆ ಯಾವುದನ್ನೂ ತೆಗೆದು ಹಾಕಬೇಕಾಗಿಲ್ಲ. ಆದ್ದರಿಂದ ನಾನು ಹೇಳಿದ್ದು ಅವರಿಗೆ ಏನಾದರೂ ತಪ್ಪಾಗಿ ಕೇಳಿ ಅವರ ಮನಸ್ಸು ನೊಂದಿದ್ದರೆ, ನಾನು ಮೇಲೆ ಹೇಳಿದ ಕಾರಣದಿಂದ ಅವರ ಮನಸ್ಸನ್ನು ನೋಯಿಸಿಕೊಳ್ಳಬಾರದೆಂದು ಕೇಳಿಕೊಳ್ಳುತ್ತೇನೆ. ಆದರೆ ವಿರೋಧಪಕ್ಷದ ನಾಯಕರು ನನ್ನ ಬಗ್ಗೆ ಆ ಸಮಯದಲ್ಲಿ ಏನು ಹೇಳಿದರೋ ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕಾಗುತ್ತದೆ. ಈ ಪ್ರಕರಣ ನಡೆದ ಸಮಯದಲ್ಲಿ ಶ್ರೀಮಾನ್ ಮಂಜುನಾಥ್ ಅವರು ಸಹ ಸ್ವಲ್ಪ ಮಾತನಾಡಿ ನಾನು ತರಗೆಲ್ಲಾ ಒಂದೇ ಮಂತ್ರ ಉಪಯೋಗಿಸುತ್ತೇನೆ, ವಿರೋಧ ಪಕ್ಷದವರಿಗೆ ಮರ್ಯಾದೆ ಕೊಡುತ್ತಿಲ್ಲ. ಎನ್ನುವ ರೀತಿಯಲ್ಲಿ ಮಾತನಾಡಿದರು. ಅದು ಪತ್ರಿಕೆಗಳಲ್ಲಿಯೂ ವರದಿಯಾಗಿದೆ. ಈ ಸಭೆಯಲ್ಲಿರುವ ಎಲ್ಲ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಏನೆಂದರೆ ನಾನು ಯಾವ ಪಾರ್ಟಿಯಲ್ಲಿಯೂ ಇಲ್ಲ, ವಿರೋಧಪಕ್ಷದ ಕಡೆಯೂ ಇಲ್ಲ, ರೂಲಿಂಗ್ ಪಾರ್ಟಿಯ ಕಡೆಯೂ ಇಲ್ಲ ಮತ್ತು ಯಾರ ಮನಸನ್ನೇ ಆಗಲಿ ನೋಯಿಸಬೇಕೆಂಬುದು ನನ್ನ ಮನಸ್ಸಿನಲ್ಲಿ ಇಲ್ಲ ಈ ಎಲ್ಲ ಕಾರಣಗಳಿಂದ ನೆನ್ನೆ ನಡೆದ ಪ್ರಕರಣದಲ್ಲಿ ವಿರೋಧಪಕ್ಷದ ನಾಯಕರ ಮನಸ್ಸು ನೊಂದಿದ್ದರೆ, ಅವರು ಮನಸ್ಸನ್ನು ನೋಯಿಸಿಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನೆನ್ನೆದಿವಸ ವಿರೋಧಪಕ್ಷದ ನಾಯಕರಿಗೆ ಮನಸ್ಸು ನೋಯಿಸುವ ಪ್ರಸಂಗವೇನೂ ನಡೆದಿಲ್ಲ. ಈ ಸಭೆಗೆ ಪ್ರೇಕ್ಷಕರನ್ನು ಬಿಡುವುದಕ್ಕೆ ಕೆಲವು ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆಂದು ಹೇಳಿದಾಗ ಈ ಮಾತನ್ನು ನಾನು ಹೇಳಿದ್ದೇನೆ. ಇಂದು ನಮ್ಮ ದೇಶದ ಬೇರೆ ರಾಜ್ಯಗಳಲ್ಲಿ ವಿಧಾನಸಭೆಯೊಳಕ್ಕೆ ಜನರು ನುಗ್ಗಿ ಮುಖ್ಯ ಮಂತ್ರಿಗಳ ತಲೆ ಒಡೆದು ರಕ್ತ ಬಿದ್ದ ಪ್ರಸಂಗ ನಡೆದಿದೆ. ಆ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇನ್ನೂ ಬಂದಿಲ್ಲ. ನನಗೆ ಅಪ್ಯಾಯಮಾನವಾಗಿದ್ದಾರೆ ಅದು ಹಾಗೆಯೇ ಇದ್ದುಕೊಂಡು ಹೋಗಲಿ ಎಂದು ತಾವು ಹೇಳುವುದಾದರೆ ಅದು ನನಗೆ ಅಪ್ಯಾಯಮಾನವಾಗಿರಲಿಲ್ಲ. ಈ ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳನ್ನು ನೋಡಲು ಪ್ರೇಕ್ಷಕರನ್ನು ಒಳಗೆ ಬಿಡುವುದಕ್ಕೆ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗ, ನಾನು ಆ ಸಂದರ್ಭದಲ್ಲಿ ಮಾತನಾಡುತ್ತಾ ಈ ಸಭೆಯ ಘನತೆ ಗೌರವ ಮತ್ತು ಶಿಸ್ತನ್ನು ಕಾಪಾಡಿಕೊಂಡು ಹೋಗುವುದರಲ್ಲಿ ನಮ್ಮೆಲ್ಲರ ಸಹಕಾರವೂ ಇದೆ, ಆದರೆ ಈ ಸಭೆಗೆ ಬರುವ ಪ್ರೇಕ್ಷಕರು ಅಂದು ಪೇಪರ್‌ಗಳನ್ನು ಎಸೆದಂತೆ ಚಪ್ಪಲಿಗಳನ್ನು ಎಸೆಯಬಹುದು, ಆಯುಧ ತಂದು ಹೊಡೆಯಬಹುದು ಎಂದು ಹೇಳುತ್ತಾ ಆ ಒಂದು ಕಾನ್‌ಟೆಕ್ಸ್ಟ್‌ನಲ್ಲಿ ಹೇಳಿದೆ ಹೊರತು, ಆ ಪದ ನನಗೆ ಅಪ್ಯಾಯಮಾನವಾಗಿದೆ ಎಂದುಕೊಂಡು ಉಪಯೋಗ ಮಾಡಲಿಲ್ಲ. ಆದರೂ ತಾವು ನನಗೆ ಅಪ್ಯಾಯಮಾನವಾಗಿದ್ದರೆ ಉಪಯೋಗ ಮಾಡಿಕೊಳ್ಳಲಿ ಎಂದು

ತಾವು ಹೇಳಿದಿರಿ. ಇಂದು ಬೇರೆ ಕೆಲವು ರಾಜ್ಯಗಳ ಅಸೆಂಬ್ಲಿಗಳಲ್ಲಿ ಚಪ್ಪಲಿಗಳನ್ನು ಉಪಯೋಗಿಸಿ ಶಾಸಕರುಗಳೇ ಹೊಡೆದಾಟ ಮಾಡಿಕೊಂಡಿದ್ದಾರೆ. ಮೈಸೂರು ರಾಜ್ಯದಲ್ಲಿ ಆ ಒಂದು ಘಟನೆ ಇನ್ನೂ ಬಂದಿಲ್ಲ.

ಅಧ್ಯಕ್ಷರು.—ಅದು ಬರುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಗೆ ಪ್ರೇಕ್ಷಕರನ್ನು ಬಿಡುವ ಬಗ್ಗೆ ಕಟ್ಟುನಿಟ್ಟಾದ ಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದಾಗ, ಆ ಬಗ್ಗೆ ಮಾತನಾಡುವಾಗ ಆ ಮಾತು ಬಂತು. ನನಗೆ ಆ ಪದವನ್ನು ಉಪಯೋಗ ಮಾಡುವುದಕ್ಕೆ ಆಪ್ಯಾಯಮಾನ ಏನಿದೆ? ಆದರೂ ತಾವು ಆ ರೀತಿ ಹೇಳಿದಾಗ ನನ್ನ ಮನಸ್ಸಿಗೆ ನೋವಾಯಿತು. ನನಗೆ ಅಪ್ಯಾಯಮಾನವಾಗಿದ್ದರೆ ಉಪಯೋಗ ಮಾಡಿಕೊಳ್ಳಲಿ ಎಂದರೆ in what way I am so interested to use such a word? I quoted instances. That is way the Chief Minister also said the matter be dropped. ನನಗೇನೂ ಆ ಪದ ಉಪಯೋಗ ಮಾಡಬೇಕೆಂಬ ಇಚ್ಛೆ ಇರಲಿಲ್ಲ. ಯಾವ ಸಂದರ್ಭದಲ್ಲಿ ಅದನ್ನು ಉಪಯೋಗ ಮಾಡಿದೆ ಎಂಬುದನ್ನು ತಾವು ಮತ್ತೊಮ್ಮೆ ರೆಕಾರ್ಡ್ ನೋಡಿ ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು.—ನಾನು ಪೂರ್ತಾ ಓದಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್.—ನೆನ್ನೆದಿವಸ ಮಾನ್ಯ ದೇವೇಗೌಡರು ಹೇಳಿದ್ದು ಆ ರೀತಿಯ ಘಟನೆಗಳು ಆಗಬಹುದು ಎಂದು ಹೇಳಿದರು. ಆಗಿನ ಸಂದರ್ಭ ಸ್ವಲ್ಪ ಬಿಸಿ ಆದಾಗ ಆ ರೀತಿ ಹೇಳಿದರು. ತಾವು ಸಹ ಉದ್ದೇಶಪೂರ್ವಕವಾಗಿ ಮಾನ್ಯ ದೇವೇಗೌಡರಿಗೆ ಆ ರೀತಿ ಹೇಳಿದಿರಿ ಎಂದು ನಾವು ತಿಳಿದುಕೊಂಡಿಲ್ಲ. ನಿಮ್ಮ ಗೌರವದ ಬಗ್ಗೆಯಾಗಲೀ, ನಿಮ್ಮ ರೂಲಿಂಗ್ ಬಗೆಯಾಗಲೀ ನಾವು ಪ್ರಶ್ನೆ ಮಾಡುವುದಿಲ್ಲ. ಮತ್ತು ನಿಮ್ಮ ಮೇಲೆ ಆಪಾದನೆ ಮಾಡಬೇಕೆಂಬುದು ನಮ್ಮ ಉದ್ದೇಶವಲ್ಲ. ನಮ್ಮ ಆಪಾದನೆ ಇದ್ದಿದ್ದು ನಿಮ್ಮ ಮಾರ್ಷಲ್ ಮೇಲೆ, ಅವರು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆಂದು ನಾವು ನೆನ್ನೆ ಹೇಳಿದ್ದು, ಅದನ್ನು ತಾವು ಸರಿಪಡಿಸಿದ್ದೀರೆಂದು ಗೊತ್ತಾಗಿದೆ, ಆದ್ದರಿಂದ ಆ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ನೆನ್ನೆ ದಿವಸ ನನಗೂ ತಲೆ ಇದೆ ಎಂದು ಮುಖ್ಯಮಂತ್ರಿಗಳಿಗೆ ಹೇಳಿದಾಗ ಅವರು ತಲೆಯೂ ಇರಬಹುದು, ಬಾಲವೂ ಇರಬಹುದು ಎಂದು ಹೇಳಿದ್ದು ಇಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಬಾಲ ಯಾರುಯಾರಿಗೆ ಇದೆ, ಯಾರು ಯಾರಿಗೆ ಇಲ್ಲ ಎಂಬುದು ಈ ರಾಜ್ಯದ ಜನತೆಗೆ ಗೊತ್ತಿದೆ.

ಕೆಲವು ಮಾನ್ಯ ಸದಸ್ಯರು—ಎಲ್ಲರಿಗೂ ಇದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶಿವಣ್ಣನವರು ಮಾನ್ಯ ಪ್ರಭಾಕರ ಅವರು ಅನೇಕ ಜನರಿಗೆ ಇದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿರುವುದರಿಂದ ನನ್ನ ಬಗ್ಗೆ ಜನತೆಯಲ್ಲಿ ಕೆಟ್ಟ ಅಭಿಪ್ರಾಯ ಮೂಡುತ್ತದೆ. ಯಾವ ದೃಷ್ಟಿ ಇಟ್ಟುಕೊಂಡು ಮುಖ್ಯಮಂತ್ರಿಗಳು ಆ ಮಾತನ್ನು ಹೇಳಿದರು ಎಂಬುದನ್ನು ತಿಳಿಸಬೇಕು. ಆ ರೀತಿ ಅವರು ಹೇಳಿರುವುದರಿಂದ ಅದು ಏನು ಅರ್ಥ ಕೊಡುತ್ತದೆ ಎಂಬುದನ್ನು ತಾವೇ ನೋಡಬಹುದು. ಅವರು ಯಾವ ಅರ್ಥದಲ್ಲಿ ಹೇಳಿದರು ಎಂಬುದು ನನಗೆ ಗೊತ್ತಿದೆ. ಆ ಮಾತನ್ನು ಮುಖ್ಯಮಂತ್ರಿಗಳಾಗಿರುವವರು ಮತ್ತು ಉನ್ನತಸ್ಥಾನದಲ್ಲಿರುವವರು ಹೇಳಬಹುದೇ ಎಂದು ನಾನು ತಮ್ಮನ್ನು ಕೇಳುತ್ತೇನೆ. ವಿರೋಧಪಕ್ಷದ ಸದಸ್ಯರಿಗೆ ಈ ರೀತಿ ಹೇಳಿದರೆ ಅದು ಅವರ ಸ್ಥಾನಕ್ಕೆ ಗೌರವವೇ ಎಂದು ಕೇಳುತ್ತೇನೆ. ಅವರು ಆ ರೀತಿ ಹೇಳಿದ್ದು ಸರಿ ಎಂದು ಹೇಳುವುದಾದರೆ ಮುಂದಿನ ಪ್ರಕರಣ ಇದ್ದೇ ಇದೆ. ನಾವೂ ಸಹ ಅವರಿಗೆ ಗೌರವ ಕೊಡಬೇಕಾಗಿದೆ. ಆದ್ದರಿಂದ ಅವರು ಯಾವ ಅರ್ಥದಲ್ಲಿ ಅದನ್ನು ಹೇಳಿದರು ಎಂಬುದನ್ನು ತಿಳಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಮತ್ತು ಅದನ್ನ ರೆಕಾರ್ಡ್‌ನಿಂದ ತೆಗೆದುಹಾಕಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಏನು ಒಂದು ಹೆಸರು ಉಪಯೋಗ ಮಾಡಿದರು ಅದರ ಬಗ್ಗೆ ಮಾನವಶಾಸ್ತ್ರದಲ್ಲಿ ವಿವರವಾಗಿ ಹೇಳಲಾಗಿದೆ. ಪ್ರತಿ ಮಾನವನಿಗೂ ಬಾಲ ಇದೆ, ಮಾನವ ಕಪಿಕುಲ ಸಂಜಾತ, ಮಾನವ ವಂಶಕ್ಕೆ ಕಪಿಯೇ ಮೂಲ, ಈಗಲೂ ಪ್ರತಿ ನರನಿಗೂ ಚರ್ಮದೊಳಗೆ ಒಂದೂಕಾಲು ಅಂಗುಲ ಬಾಲವಿದೆ ಎಂದು ಅದರಲ್ಲಿ ಹೇಳಿದೆ. ಮಾನ್ಯ ವಾಟಾಳ್ ನಾಗರಾಜ್ ಅವರಿಗೂ ಇದೆ. ಅದು ಅವರಿಗೆ ಗೋಚರವಿಲ್ಲದೆ ಮಾತನಾಡಿದ್ದಾರೆ. ಪ್ರತಿಯೊಬ್ಬರ ಚರ್ಮದೊಳಗೂ ಬಾಲವಿದೆ. ಮತ್ತು ನಿನಗೆ ತಲೆ ಇದೆಯೇ ಎಂದು ಕೇಳುವುದರ ಅರ್ಥ ಬುದ್ಧಿ ಇದೆಯೇ ಎಂದು. ಮನುಷ್ಯ ಕೂಡ ವಾನರತಿಯಂತೆ ಚೇಷ್ಟಾ ಪ್ರವೃತ್ತಿಯ ವ್ಯಕ್ತಿಯೇ

(ಶ್ರೀ ಕೆ. ಪ್ರಭಾಕರ್)

ಆಗಿದ್ದಾನೆ. ಮಾರುತಿಗೆ ಬಾಲವಿದೆ. ಯಾರಾದರು ಚೇಷ್ಟೆ ಮಾಡಿದರೆ ಅವರನ್ನು ಮಾರುತಿಗೆ ಹೋಲಿಕೆ ಮಾಡುವುದು ಸ್ವಭಾವ. ಮಾನ್ಯ ವಾಟಾಳ್‌ನಾಗರಾಜ್ ಅವರು ಬಹಳ ಬುದ್ಧಿವಂತರು. ಅವರಿಗೆ ಒಂದೊಂದು ಸಲ ಚೇಷ್ಟೆ ಏತಕ್ಕೆ ಬರುತ್ತದೋ ಗೊತ್ತಾಗುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್.—ಇದು ಅತಿರೇಕದ ಮಾತು. ಹಿರಿಯ ಸದಸ್ಯರಾದವರು ಈ ರೀತಿ ಮಾತನಾಡುವುದು ಸರಿಯಲ್ಲ. ಅವರಿಗೆ ಅನೇಕ ಅನುಮಾನಗಳು ಇರಬಹುದು. ಅವರು ಹೇಳಿದಂಥ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಪ್ರಭಾಕರ ಅವರು ಆರೋಗ್ಯಶಾಸ್ತ್ರದ ಬಗ್ಗೆ ಹೇಳುತ್ತಾ ಶ್ರೀಮಾನ್ ವಾಟಾಳ್‌ನಾಗರಾಜ್ ಅವರ ಮೇಲೆ ನೇರವಾದ ಅಪಾದನೆ ಮಾಡಿದರು. ಒಂದೊಂದು ಸಲ ಹೆಚ್ಚು ಮಾತನಾಡಿ ಚೇಷ್ಟಾಪ್ರವೃತ್ತಿಯನ್ನು ತೋರಿಸಿಕೊಳ್ಳುವುದಕ್ಕೆ ಹೋಗುತ್ತಾರೆಂದು ಸಮರ್ಥನೆ ಮಾಡುವುದಕ್ಕೆ ಹೋದರು. ಮುಖ್ಯಮಂತ್ರಿಗಳ ಬಾಯಿಂದ ಆ ರೀತಿಯ ಪದ ಪ್ರಯೋಗವಾದರೂ ಸಹ ಅದು ತಪ್ಪಾಗುತ್ತದೆ. ನಾನು ಹೇಳಿದರೂ ತಪ್ಪಾಗುತ್ತದೆ. ಈ ಸಭೆಯ ಯಾರೇ ಸದಸ್ಯರಾಗಲೀ, ಬೇರೆ ಸದಸ್ಯರ ಬಗ್ಗೆ ನೋವಾಗುವಂತಹ ಪದವನ್ನು ಉಪಯೋಗಮಾಡಿದರೆ ಅದು ತಪ್ಪಾಗುತ್ತದೆ. ಅದು ನನಗೂ ಅನ್ವಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಯಾವ ಅರ್ಥದಲ್ಲಿ ಆ ರೀತಿ ಹೇಳಿದರೋ ನನಗೆ ಗೊತ್ತಿಲ್ಲ. ಅವರು ಆ ರೀತಿ ಉಪಯೋಗ ಮಾಡಬಹುದು ಎಂದು ಹೇಳುವುದಾದರೆ ನಾವೂ ಸಹ ಮಾಡುತ್ತೇವೆ. ಆದಕಾರಣ ಮಾನ್ಯ ಮುಖ್ಯಮಂತ್ರಿಗಳು ಆ ರೀತಿಯ ಪದ ಪ್ರಯೋಗ ಮಾಡಿದ್ದು ಉಚಿತವಲ್ಲವೆಂದು ನನ್ನ ಭಾವನೆ. ಅದನ್ನು ರೆಕಾರ್ಡಿನಿಂದ ತೆಗೆಸಿ ಹಾಕುದು ಕ್ಷೇಮ ಎಂದು ನನ್ನ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರಾದ ಶ್ರೀಮಾನ್ ಪ್ರಭಾಕರ್ ಅವರು ಈ ಸಭೆಯ ಸದಸ್ಯರೊಬ್ಬರ ಬಗ್ಗೆ ಆ ರೀತಿ ಮಾತನಾಡುವುದು ಉಚಿತವಲ್ಲ. ಆದಿಮಾನವ ಕಾಲದಿಂದಲೂ ಸಮಾಜದ ಬದಲಾವಣೆಯ ಬಗ್ಗೆ ಅವರು ಹೇಳಬೇಕಾಗಿಲ್ಲ. ಅವರು ಹೇಳಿದ ವಿಷಯ ಗಂಭೀರವಾಗಿದೆ. ಆದ್ದರಿಂದ ಅವರು ಹೇಳಿದ್ದನ್ನು ಆಕ್ಷೇಪಣೆ ಮಾಡುವ ಪರಿಸ್ಥಿತಿ ಬರುತ್ತದೆ. ಮತ್ತು ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತು ಇವೊತ್ತು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ. ಅವರು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆ ಎಂಬುದನ್ನು ನೋಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಮೇಲೆ ತಪ್ಪು ಹೊರಿಸುವುದಕ್ಕಾಗಿ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅದು ಪತ್ರಿಕೆಯಲ್ಲಿ ಕೂಡ ಬಂದಿದೆ. ಅದು ಪತ್ರಿಕೆಯಲ್ಲಿ ಬಂದ ಮೇಲೆ ಆ ಬಗ್ಗೆ ಜನಗಳಿಗೆ ಒಂದು ಅಭಿಪ್ರಾಯ ಬರುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳಿಗೆ ನನಗೆ ತಿಳಿದಮಟ್ಟಿಗೆ ಯಾರಿಗೇ ಆಗಲಿ ಅಗೌರವ ತೋರಿಸಬೇಕು ಎಂದು ಉದ್ದೇಶ ಇರಲಿಲ್ಲ. ಆದ್ದರಿಂದ ಅದು ಯಾವ ಕಾಂಟೆಕ್ಸ್ಟ್‌ನಲ್ಲಿ ಬಂದಿದೆ ಎಂಬುದನ್ನು ನಾನು ನೋಡಿ ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಹಿರಿಯ ಸದಸ್ಯರಾದ ಶ್ರೀ ಪ್ರಭಾಕರ್ ಅವರು ಆ ರೀತಿ ಹೇಳಿದ್ದು ಮನಸ್ಸಿಗೆ ಬಹಳ ಸಂಕಟವಾಗಿದೆ. ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುವುದು ಏನೆಂದರೆ ನಿಶ್ಚಿತವೂ, ಸ್ಥಿಮಿತವೂ ಇಲ್ಲದೆ ಇರತಕ್ಕ ಮಂತ್ರಿಮಂಡಲ ಈಗ ರಾಜ್ಯದಲ್ಲಿ ಇದೆ. ಕೆಲವರಿಗೆ ಮಂತ್ರಿಮಂಡಲ ಅದಲು ಬದಲಾದರೆ ತಮಗೆ ಅವಕಾಶ ಸಿಕ್ಕುತ್ತದೆ ಎನ್ನುವ ಮನೋಭಾವ ಇದೆ. ಈಗ ಅವಕಾಶ ಸಿಗದ ಅಮಲಿನಲ್ಲಿ ಹೀಗೆ ಮಾತನಾಡುವುದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಮುಖ್ಯ ಮಂತ್ರಿಗಳು ನಗುತ್ತಾ ಈ ಸಭೆಯಲ್ಲಿ ಕುಳಿತುಕೊಂಡಿರುವಾಗ ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ್ ಅವರು ಛಂಗನೆ ಮಂಗನಂತೆ ನೆಗೆಯುವ ಅವಶ್ಯಕತೆ ಇರಲಿಲ್ಲ. ಇದನ್ನೆಲ್ಲಾ ನೋಡಿದರೆ ನಿಶ್ಚಿತವಿಲ್ಲದೇ ಇರತಕ್ಕ ಮಂತ್ರಿ ಮಂಡಲದಲ್ಲಿ ಕೆಲವರು ಅವಕಾಶವನ್ನು ಪಡೆಯುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಅವರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಎಚ್ಚರಿಕೆಯಿಂದ ಇರಬೇಕು ಎಂದು ನಾನು ಅಧ್ಯಕ್ಷರ ಮುಖಾಂತರ ಅವರಿಗೆ ಹೇಳುತ್ತೇನೆ. ಈಗ ಮುಖ್ಯ ಮಂತ್ರಿಗಳು ಉಳಿಯುತ್ತಾರೆಯೋ ಅಥವಾ ಹೋಗುತ್ತಾರೆಯೋ ಹೇಗೆ? ಶ್ರೀಮಾನ್ ಬಸವಲಿಂಗಪ್ಪನವರು ಮುಖ್ಯ ಮಂತ್ರಿಗಳನ್ನು ತೆಗೆದುಹಾಕಿ ಅವರ ಕುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಹೊರಟಿದ್ದಾರೆ ಎಂದು ನಮಗೆ ಸುದ್ದಿ ಬಂದಿದೆ. ಆದ್ದ

ರಿಂದ ಅವರು ಈ ರಾಜ್ಯಕ್ಕೆ ಮುಖ್ಯ ಮಂತ್ರಿಗಳಾಗಿ ಬರುತ್ತಾರೆಯೇ ಹೇಗೆ ಎಂಬುದು ನಿಶ್ಚಿತವಾಗಿ ಗೊತ್ತಾಗಬೇಕು. ಈಗ ಇರತಕ್ಕ ಮಂತ್ರಿಮಂಡಲ ಖಾಯಂ ಆಗಿ ಇರುತ್ತದೆಯೇ ಹೇಗೆ ಎಂಬುದನ್ನು ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಮಾತನಾಡುವ ಅವಶ್ಯಕತೆ ಇರಲಿಲ್ಲ. ನಾನು ಹೇಳಿದ್ದರ ಮೇಲೆ ವ್ಯಾಖ್ಯಾನ ಮಾಡಬಾರದು ಎಂದು ಹೇಳಿದವರೇ ಮಂಗನಹಾಗೆ ಆಡುತ್ತಿದ್ದೀರಲ್ಲಾ ಎಂದು ಹೇಳಿದರೆ ಅದಕ್ಕೇನು ಮಾಡುವುದು. ಇದು ಚರ್ಚೆ. ಚರ್ಚೆಯನ್ನು ಕ್ರೀಡಾ ಮನೋಭಾವದಿಂದ ತಗೆದುಕೊಳ್ಳಬೇಕು. ನಾನು ಅನ್‌ಪಾರ್ಲಿಮೆಂಟರಿ ಆದದ್ದನ್ನು ಹೇಳಿದರೆ ಅದನ್ನು ತೆಗೆದು ಹಾಕಬೇಕು ಎಂದು ಹೇಳಿದ್ದಾರೆ. ಯಾರಿಗೋ ಲೈಸೆನ್ಸ್ ಕೊಟ್ಟಿರಿ ಲಾಭಪಡೆದುಕೊಂಡಿರಿ ಎಂದೆಲ್ಲಾ ಹೇಳಿದ್ದೀರಿ. ಅದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಹೀಗೆ ಅಪಾದನೆಗಳನ್ನು ಮಾಡಿದ ಮಾತ್ರಕ್ಕೇ ಅದು ನಮಗೆ ಅಗೌರವ ಎಂದು ತಿಳಿದುಕೊಳ್ಳಬಾರದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಪಾರ್ಲಿಮೆಂಟರಿ ಯಾವುದು ಅನ್‌ಪಾರ್ಲಿಮೆಂಟರಿ ಯಾವುದು ಎಂಬುದನ್ನು ನಿರ್ಧಾರ ಮಾಡಿ ತೀರ್ಮಾನ ಕೊಡುವ ಅಧಿಕಾರ ಅಧ್ಯಕ್ಷರಿಗೆ ಇದೆ. ಅವರು ಹೇಳಿದ್ದಕ್ಕೆ ನಾನು ತಲೆಬಾಗುತ್ತೇನೆ. ಇಲ್ಲಿ ಪಾರ್ಲಿಮೆಂಟರಿ ಮತ್ತು ಅನ್‌ಪಾರ್ಲಿಮೆಂಟರಿ ಪ್ರಶ್ನೆಯಲ್ಲ. ಯಾವ ಕಾಂಟೆಕ್ಸ್ಟಿನಲ್ಲಿ ಆ ಅರ್ಥ ಬರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೋ ಗೊತ್ತಿಲ್ಲ. ಆದರೆ ಅವರು ಹೇಳಿದ ಮಾತಿನಿಂದ ಈ ಕಡೆ ಕುಳಿತುಕೊಂಡಿರತಕ್ಕ ಸದಸ್ಯರಿಗೆ ಮನಸ್ಸಿಗೆ ನೋವಾಗಿದೆ. ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತುಗಳು ಪತ್ರಿಕೆಯಲ್ಲಿ ಬಂದಿದೆ. ಆ ಮಾತು ಅವರ ಬಾಯಿಂದ ಬರತಕ್ಕದ್ದು ಅಲ್ಲ. ಆದ್ದರಿಂದ ಅವರು ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಮಾಡಿದಂತಹ ಪದ ಪ್ರಯೋಗದ ಬಗ್ಗೆ ತಾವು ಯಾವ ಕಾಂಟೆಕ್ಸ್ಟಿನಲ್ಲಿ ಹೇಳಿದ್ದಾರೆ ಎಂಬದನ್ನು ನೋಡಿ ನಾನು ನಿರ್ಣಯ ಕೊಡುತ್ತೇನೆ ಎಂದು ತಾವು ಹೇಳುದ್ದೀರಿ. ಈಗ ಶ್ರೀಮಾನ್ ಪ್ರಭಾಕರ್ ಅವರೂ ಮತ್ತು ಶ್ರೀಮಾನ್ ಬಿ. ಪುಟ್ಟಸ್ವಾಮಯ್ಯನವರು ಉಪಯೋಗಿಸಿದ ಪದಗಳು ಸರಿಯಲ್ಲ. ಈ ಸಭೆಯ ನಡವಳಿಕೆಯಲ್ಲಿ ಇಂಥಾ ಪದ ಪ್ರಯೋಗ ಮಾಡುವುದು ಉಚಿತ ಎಂದು ಹೇಳಿದರೆ ಅದಕ್ಕೆ ನನ್ನ ಅಡ್ಡಿ ಏನೂ ಇಲ್ಲ. ನಡೆದುಕೊಂಡು ಹೋಗಲಿ. ಆ ಎರಡು ಪದಗಳನ್ನು ಎಕ್ಸ್‌ಪಂಜ್ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ನಾನು ವೈಯುಕ್ತಿಕವಾಗಿ ತಮ್ಮ ಬಗ್ಗೆ ಅಪಾರವಾದ ಗೌರವನ್ನು ಇಟ್ಟುಕೊಂಡಿರತಕ್ಕ ಸದಸ್ಯ. ತಲೆಗೊಂದು ಒಂದೇ ಮಂತ್ರ ಎಂದು ಮಂಜುನಾಥ್ ಹೇಳಿದರು ಎಂದು ತಾವು ಅಪ್ಪಣೆ ಕೊಡಿಸಿದಿರಿ. ತಮ್ಮ ಬಗ್ಗೆ ನಾನು ಆ ತರಹ ಹೇಳಿಲ್ಲ. ಬಹುಶಃ ನಾನೇನಾದರೂ ಅದನ್ನು ಹೇಳಿದ್ದರೆ ಬೇರೆ ಉದಾಹರಣೆಗೆ ಹೇಳಿರಬಹುದು. ಆದರೆ ತಮ್ಮ ಬಗ್ಗೆ ಮಾತ್ರ ನಾನು ಆ ಮಾತನ್ನು ಹೇಳಿಲ್ಲ.

Converting of a Notice under Rule 312 as a Call Attention Notice

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ 312ನೇ ರೂಲ್ ಪ್ರಕಾರ ನಾನು ಒಂದು ನೋಟೀಸನ್ನು ತಮಗೆ ಕೊಟ್ಟಿದ್ದೆ. ಅದಕ್ಕೆ ತಮ್ಮಿಂದ ನನಗೆ ಉತ್ತರ ಬಂದಿದೆ.

ಅಧ್ಯಕ್ಷರು.—ನಾನು ಅದನ್ನು ಕಾಲ್ ಅಟೆನ್‌ಷನ್ ನೋಟಿಸ್ ಆಗಿ ಪರಿವರ್ತನೆ ಮಾಡಿದ್ದೇನೆ.

(*Sri Kagodu Thimmpa Stood Up*)

3-30 P.M.

SRI S. BANGARAPPA.—You have converted my notice under Rule 312 into a call attention notice.

MADAM SPEAKER.—He may please resume his seat. I have converted the notice into a call attention notice. If the hon. member persists, how am I to regulate the business of the House. All the hon. members should co-operate with the Chair to regulate the business of the House. I request the hon. member not to raise the same issue again and again.

Sri S. BANGARAPPA.—I ,equest the Chair kindly to bear with me for a minute.

MADAM SPEAKER.—You please resume your seat.
(Sriyuts Bangarappa and Kagodu Thimmappa were seen talking simultaneously and in the din nothing was heard)

If the hon. member Sri Bangarappa does not resume his seat, I will be compelled to name him. I request him once agian to resume his seat.

Sri S. BANGARAPPA.—My notice is a very important one. In order to reach my call attention notice, it will take many days. This is a very urgent matter and I therefore request the Chief kindly to allow me to raise this subject.

(Sri Vatal Nagaraj Stood Up)

MADAM SPEAKER.—I have converted his notice as calling attention notice.- As soon as I get the statement from the Government, I shall include it in the agenda. Besides, the Hon. Minister who is concerned is not present.

(Sri Bangarappa continued defying the Chair)

Sri D. DEVARAJ URS.— I raise a point of order. It is not proper for the hon. member to go on persisting inspite of repeated requests being made by the Hon. Speaker to resume his seat I would appeal to the hon. member kindly to obey the orders of the Chair.

ಶ್ರೀ ಎಸ್. ಬಂಗಾರಪ್ಪ.—ನಾನು ಸಹ ಒಂದು ಅಪೀಲ್ ಮಾಡುತ್ತೇನೆ. ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದ್ದುದರಿಂದ ಇದಕ್ಕೆ ಮಹತ್ವವನ್ನು ಕೊಡಬೇಕು. ಮತ್ತು ಅದ ಕೋಸ್ಕರವೇ ನಾನು ಇದನ್ನು ಇಲ್ಲಿ ಎತ್ತುವುದಕ್ಕೆ ನನಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುವುದು.

Sri D. DEVARAJ URS.—The hon. member cannot hold the House to ransome.

Sri S. BANGARAPPA.—The Chief Minister cannot suppress the rights of the hon. members here. We are appealing to the chair te take up this important matter for discussion.

ಶ್ರೀ ಎಚ್. ಡಿ. ದೇವೇಗೌಡ.—ತಾವು ಆಗಲೇ ಅದನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತಿಸಿದ್ದೀರಿ ಎಂದು ಹೇಳಿದ್ದೀರಿ; ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದಲ್ಲದೆ ಆಗಲೇ ತಾವು ಹೇಳಿದ್ದೀರಿ ದಿವಸಕ್ಕೆ ಎರಡು ಕಾಲಿಂಗ್ ಅಟೆನ್‌ಷನ್ ನೋಟೀಸುಗಳನ್ನು ತೆಗೆದು ಕೊಳ್ಳುತ್ತಿದ್ದೇವೆ ತೊಂಭತ್ತೊ, ನೂರೋ ಇನ್ನೂ ಇವೆ ಎಂದು ಇತ್ಯಾದಿ ಹೇಳಿದ್ದೀರಿ. ದಿವಸಕ್ಕೆ ಎರಡು ತೆಗೆದುಕೊಂಡರೂ 40-50 ದಿವಸ ಬೇಕಾಗುತ್ತದೆ. ಶ್ರೀ ಬಂಗಾರಪ್ಪನವರು ಅದನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತನೆ ಮಾಡಿದರೆ ತೊಂದರೆಯಾಗುತ್ತದೆ.ಆದ್ದರಿಂದ

(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ವ್ಯಾಪ್ತಿ ಕ್ರಮಾಂಕ Accession No. 6006
ದಿನಾಂಕ Date............

ಅದಕ್ಕೆ ಉತ್ತರ ಜಾಗ್ರತೆ ತರಿಸಿಕೊಡಿ ಎಂದು ಹೇಳುತ್ತಿದ್ದಾರೆ. ಅವರು ಹೇಳತಕ್ಕಂತಹ ವಿಚಾರ ವೇನೆಂದರೆ ಅಲ್ಲಿ 250 ಕೆಲಸಗಾರರನ್ನು ಕಿತ್ತು ಹಾಕಿದ್ದಾರೆ; ಅದನ್ನು ಸರ್ಕಾರದ ಗಮನಕ್ಕೆ ತಂದು ಒಂದು ಪರಿಹಾರವನ್ನು ದೊರಕಿಸಿ ಕೊಡಬೇಕೆಂಬುದೇ ಅವರ ಉದ್ದೇಶ. ಮೊನ್ನೆ ನಾವು ರೂಲ್ 15ರ ಪ್ರಕಾರ ಒಂದು ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅನುಮತಿಗೆ ತಮ್ಮಲ್ಲಿ ಕಳುಹಿಸಿದ್ದೇವೆ. ಅದಕ್ಕೆ ತಾವು ಆಗುವುದಿಲ್ಲವೆಂದು ಉತ್ತರ ಕಳುಹಿಸಿದ್ದೀರಿ. ತಾವು ಹೀಗೆ ಮಾಡಿದರೆ, ನಾವು ಅಂಥ ಗಹನವಾದ ವಿಚಾರಗಳ ಮೆರಿಟ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಕಾದರೆ ತಮ್ಮ ಅನುಮತಿ ಬೇಕಾಗುತ್ತದೆ. ಹಾಗೆ ನಮಗೆ ತಾವು ಅನುಮತಿ ಯಾ ಕೊಡುವುದು ಯಾ ಬಿಡುವುದು ತಮಗೆ ಸೇರಿದ್ದು. ಕೆಲವು ವಿಷಯಗಳು ನಮ್ಮ ದೃಷ್ಟಿಯಲ್ಲಿ ಬಹಳ ಗಹನವಾದುದು ಎಂದು ಇರುವುದರಿಂದ ಅವುಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ತಮ್ಮ ಅನುಮತಿ ಕೇಳುತ್ತೇವೆ. ಆದರೆ ಅದಕ್ಕೆ ಅನುಮತಿ ನಿರಾಕರಣೆ ಮಾಡುವುದಕ್ಕಿಂತ ಮುಂಚೆ ಯಾವ ಕಾರಣಕ್ಕಾಗಿ ನಿರಾಕರಣೆ ಮಾಡುತ್ತೀರಿ ಎಂದು ಹೇಳದೆ ತಾವು ಒಂದೇ ಸಲ ನಿರ್ಣಯ ಮಾಡಿಬಿಟ್ಟರೆ ನಾವು ಮತ್ತೆ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ಈಗ ರೂಲ್ 49, 312 ಮುಂತಾದುವುಗಳ ಕೆಳಗೆ ನಾವು ಕೆಲವು ವಿಚಾರಗಳನ್ನು ಎತ್ತಬಹುದು. ಆದರೆ ಹಾಗೆ ಎತ್ತುವಾಗ ಅವುಗಳ ಮೆರಿಟ್ ಬಗ್ಗೆ ಪ್ರತಿಪಾದನೆ ಮಾಡುವುದಕ್ಕೆ ನಮಗೆ ಅವಕಾಶ ಬೇಕಾಗುತ್ತದೆ ಅವಕಾಶ ಕೊಟ್ಟ ಮೇಲೆ ತಾವು ಏನು ನಿರ್ಣಯ ಬೇಕಾದರೂ ತಗೆದುಕೊಳ್ಳಬಹುದು ಅದಕ್ಕೆ ನಾವು ತಲೆಬಾಗುತ್ತೇವೆ. ಆದುದರಿಂದ ನಮ್ಮನ್ನು ಕೇಳದೆ ಏನಾದರೂ ನಮಗೆ ಎಂಡೋರ್ಸ್‌ಮೆಂಟ್ ಬಂದರೆ ಅದನ್ನು ಪುನಃ ಎತ್ತಿ ಅದರ ಮೆರಿಟ್ ಬಗ್ಗೆ ಇಲ್ಲಿ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಮಗೆ ಕೆಲವು ಗಂಭೀರವಾದ ಪ್ರಶ್ನೆಗಳು ಬರುತ್ತವೆ. ಅವುಗಳನ್ನು ನಾವು ಇಲ್ಲಿ ಎತ್ತಿ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಅದಕ್ಕೆ ತಾವು ಎಡೆಗೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಹೊರಗಡೆ ನಮಗೆ ಕೆಲವು ತೊಂದರೆಗಳು ಇರುವುದರಿಂದ ಅವುಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ನಾನು ತಮ್ಮ ಮೂಲಕ ಅರಿಕೆ ಮಾಡಿ ಕೊಳ್ಳುವುದೇನೆಂದರೆ ನಾವು ಏನಾದರೂ ರೂಲ್ ಪ್ರಕಾರ ನೋಟೀಸ್ ಕಳುಹಿಸಿದಾಗ ಪ್ರತಿಯೊಂದನ್ನೂ ತಳ್ಳಿಹಾಕಿ ನಮಗೆ ಅವಕಾಶ ಇಲ್ಲದ ಹಾಗೆ ಮಾಡಬಾರದು. ಅದನ್ನು ಸರ್ಕಾರಕ್ಕೆ ಕಳುಹಿಸಿ ನಮಗೆ ಉತ್ತರ ತರಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಎಲ್ಲರಿಗೂ ಒಪ್ಪಿಗೆ ಕೊಡದೇ ತೊಂದರೆ ಕೊಡತಕ್ಕ ಉದ್ದೇಶ ನಮಗೆ ಇಲ್ಲ; ಮತ್ತು ನಮ್ಮ ಆಫೀಸಿಗೂ ಇಲ್ಲ. ಸದಸ್ಯರು ಹಲವು ರೀತಿಯಲ್ಲಿ ಸರ್ಕಾರದಿಂದ ಉತ್ತರವನ್ನು ತೆಗೆದುಕೊಳ್ಳಬಹುದು. ಪ್ರಶ್ನೆಗಳನ್ನು ಕೇಳಬಹುದು, ಅಡ್‌ಜರ್ನ್‌ಮೆಂಟ್ ಮೋಷನ್ ಕಳಿಸಬಹುದು; ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಬಹುದು, ಅರ್ಧ ಗಂಟೆಯ ಚರ್ಚೆಗೆ ಅವಕಾಶ ಕೇಳಬಹುದು—ಹೀಗೆ ಹಲವು ರೀತಿಯ ಅವಕಾಶಗಳು ಇವೆ. ಅದು ಬಿಟ್ಟು ಪ್ರತೀ ದಿವಸ ರೂಲ್ 312ರ ಪ್ರಕಾರ ಕಾಲ ತಳ್ಳುತ್ತಾ ಇದ್ದರೆ ಹೇಗೆ ? ನೀವೆಲ್ಲಾ ಈ ವಿಚಾರಗಳಲ್ಲಿ ಸಹಕಾರ ಕೊಡದಿದ್ದರೆ ಸಭೆಯ ಕಾರ್ಯಕಲಾಪಗಳನ್ನು ಆದರೂ ಹೇಗೆ ನಡೆಸುವುದು ? ಮಾನ್ಯ ಸದಸ್ಯರು ಈಗ ಕಾಲಿಂಗ್ ಅಟೆನ್‌ಷನ್ ನೋಟೀಸಿಗೆ ಬೇಗನೆ ಉತ್ತರ ತರಿಸಿ ಕೊಡಬೇಕೆಂದು ಹೇಳುವುದು ಬಿಟ್ಟು ಅದನ್ನೇ ಪುನಃ ಪುನಃ ಹೇಳುತ್ತಿದ್ದರೆ ಏನು ಪ್ರಯೋಜನ ?

ಶ್ರೀ ಎಂ. ಎಸ್. ಕೃಷ್ಣನ್.—ಈ ಸಂದರ್ಭದಲ್ಲಿ ಕಾಲ್ ಅಟೆನ್‌ಷನ್ ವಿಷಯವಾಗಿ ಒಂದು ನೋಟೀಸ್ ಕೊಟ್ಟರೂ ಸಹ ಉತ್ತರಗಳು ಬರುವುದು ಬಹಳ ನಿಧಾನವಾಗುತ್ತಿದೆಯೆಂದು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. 17 ದಿನಗಳಾದರೂ ಒಂದು ಉತ್ತರ ಬಂದಿಲ್ಲವೆಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ಎಲ್ಲೋ ಒಂದೊಂದು ಕೇಸ್ ಅಪರೂಪವಾಗಿ ಆ ರೀತಿ ಆಗಿರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಸುಮಾರು 250 ಮಂದಿಯನ್ನು ಸಸ್‌ಪೆಂಡ್ ಮಾಡಿದ್ದಾರೆಂಬ ಅಂಶದ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಬಗ್ಗೆ ಅವರು ಕಾಲ್ ಅಟೆನ್‌ಷನ್ ವಿಷಯ ಕೇಳಿದ್ದೇನೆಂದರೆ ಅದಕ್ಕೆ ಸರ್ಕಾರದವರು ಉತ್ತರ ಹೇಳುವುದು ಬೇಡವೇ ?

ಅಧ್ಯಕ್ಷರು.—ಅದಕ್ಕೆ ನಾನು ಜವಾಬು ತರಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಅದಕ್ಕೆ ಇದ ವರೆಗೆ ಉತ್ತರ ಬಂದಿಲ್ಲ.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ

ಅಧ್ಯಕ್ಷರು.— ನೀವು ಈ ರೀತಿ ಹಟ ಮಾಡುವುದಾದರೆ ಬಾಕಿಯುವರಿಗೂ ಹಟ ಮಾಡುವುದಕ್ಕೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಹಟ ಮಾಡುವ ಪ್ರಶ್ನೆಯೇನೂ ಇಲ್ಲ. ನನ್ನ ಕಾಲ್ ಅಟೆನ್ಷನ್ ನೋಟೀಸಿಗೆ ಇನ್ನೂ ಸರ್ಕಾರದಿಂದ ಉತ್ತರ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಸರ್ಕಾರದ ಅವ್ಯವಸ್ಥೆ ಈ ರೀತಿ ಆಗುತ್ತಿದೆ.

(Both Sriyuths Kagadu Thimmappa and Bangarapa were shouting simultaneously inspite of repeated requests by the Madam Speaker. There was confusion and nothing was heard. Madam Speaker ordered that nothing should be recorded.)

Matter not recorded as ordered by the Chair.

Sri H. M, CHANNABASAPPA.—I am on a point of order. I am sorry to say that we are not able to know what is going on, if 3 to 5 people were to talk simultaneously. The House is not in order. As per rules one member should speak at a time otherwise the House will not be able to understand anything. If some of the members speak simultaneously, I am afraid much time of the House will be wasted. Please give a ruling in the matter so that one member at a time should speak.

Sri K. M. NAGANNA.—Can a Minister give a direction to the Speaker ?

MADAM SPEAKER.—It is a suggestion and not a direction. Inspite of several requests by the Chair Sri Bangarappa went on shouting about the suspension of 250 employees.

MADAM SPEAKER.—I think I have to name the Hon. Member.

Sri H. D DEVE GOWDA.—He is not questioning to revise the ruling.

MADAM SPEAKER.—He must withdraw from the House.

Sri S. BANGARAPPA.—It is not my intention to disobey the Chair.

MADAM SPEAKER.—If he doesnot withdraw I am going to name him now.

(Sri S. Banagarappa still persisted in speaking something)

MADAM SPEAKER.—I name Sri Bangarappa,

Motion for suspersion of Bangarappa.

Sri D. DEVARAJ URS.—I beg to move that the Hon. Member Sri S. Bangarappa may be suspended for the day.

SriS. BANGARAPPA.—There isno necessity to go out of the House.

Sri D. DEVARAJ URS.—I beg to mova that the hon. Member may be named and he may withdraw from the House. I move that the Hon. Member may be suspended from this House for the day.

Sri S. BANGARAPPA.—There is no necessity to go out of the House.

MADAM SPEAKER.—He will be sent out if he does not go.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯ ವಾನ್ಯ ಅಧ್ಯಕ್ಷರಿಗೆ ಬಿಟ್ಟದ್ದು......

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರ ರೂಲಿಂಗ್ ಬಗ್ಗೆ ಬಂಗಾರಪ್ಪನವರಿಗೆ ವಿರೋಧ ವಿಲ್ಲ. ಆದರೆ ಆ 250 ಜನ ಕೆಲಸಗಾರರ ಬಗ್ಗೆ ವಿವರಣೆ......

ಅಧ್ಯಕ್ಷರು.—ಅದನ್ನು ತಿಳಿಸಿದ್ದಾಗಿದೆ.

SRI C. M. ARUMUGHAM.—Madam Speaker, I have a submission.

MADAM SPEAKER.—No speeches are allowed.

SRI C. M. ARUMUGAM.—I am marking a submission for consideration. My submission is that Mr. Bangarappa, in the coruroe of his anxiety to bring to the notice of the Government.

MADAM SPEAKER.—Is there no limit for that ?

SRI C. M. ARUMUGHAM.—There was a limit. He was not quesetioning the authority or the Ruling of the Speaker. He was all the time submitting to the Speaker repeatedly that he must be given some chance to explain. His motion has been converted into a Calling Aitention Motion and Government takes a lot of time......

SRI S. M. SHEERNALY CHANDRASEKHAR.—I have a Point of Order.

MADAM SPEAKER.—Will you, Sri Chandrasekhar, please sit down.

SRI C. M. ARUMUGHAM.—I submit on behalf of the Opposition to kindly reconsider the Ruling. I have also a submission to the Chief Minister. This is a point concerning the removal of hundreds of workers and Mr. Bangarappa was only insisting that he should get a chance to explain it. Madam Speaker, it was not his intention to flout your decision.

MADAM SPEAKER.—What is the hon. Member saying ? I have followed everything. I have heard him very patiently and I have requested him repeatedly.

SRI C. M. ARUMUGHAM.—Another point was that when Government was xplaining, you have called Mr. Thimmappa and so we have not heard Mr. Bangarappa Mr. Thimmappa was representing about the Taluk Board election. I appeal to the Hon. Chief Minister and to you. Madam Speaker, to kindly reconsider naming Mr. Bangarappa and also suspending him for the day.

SRI D. DEVARAJ URS.—I would very much love to respect the sentiments of the hon. Member Mr Arumugam, who just now made an appeal. I am afraid the appeal must have been made to the proper quarters even before this. The hon. Member was sitting patiently, perhaps sometimes enjoying and sometimes feeling very much for what was going on. But he has chosen to get up a little too late. I wish the hon. Member had made that appeal through the other hon. Member who has thought it fit to flout the Ruling of the Chair. Whether he wanted to say this or that is not the issue at hand. The question is : for the time the Hon. Speaker asked the hon. Member

(SRI D. DEVARAJ URS)

to sit down and I was compelled to do it only after the Speaker named the Member. After naming the hon. Memb·r, if Mr Ar nugam were to say that it should be reconsidered, I would app al to him to reconsider what all he spoke ; whether he was not too lat ; whether his appeal should be through the hon. Member who thought it fit to go against the wishes of the Ruling of the Speaker.

Sri C. M. ARUMUGHAM.—The Speaker has abundant patience. At no time she was perturbed. In fact, she has got too much patience and I never thought she would name him. I was under that impression,

MADAM SPEAKER.—I would like to know whether Mr Bangarappa would withdraw or not.

Sri C. M. ARUMUGHAM.—You will have to kindly reconsider. We can appeal to you only. There is no appellate authority.

Sri D. DEVARAJ URS.—It is the House that has passed the resolution.

Sri C. M. ARUMUGHAM.—Yon moved it; nobody has said yes no to it.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರಲ್ಲಿ ಒಂದು ಪ್ರಾರ್ಥನೆ. ಬಂಗಾರಪ್ಪನವರು ಅಧ್ಯಕ್ಷರ ಕಡೆಗೆ ರೂಲ್ 312 ರ ಪ್ರಕಾರ ಒಂದು ನೋಟೀಸನ್ನು ಕೊಟ್ಟಿದ್ದರು. ಆ ವಿಚಾರದಲ್ಲಿ ಅಧ್ಯಕ್ಷರು ಒಂದು ಎಂಡಾರ್ಸ್‌ಮೆಂಟನ್ನು ಅವರಿಗೆ ಕಳುಹಿಸಲಾಗಿದೆ ಎಂದು ಹೇಳುತ್ತಿದ್ದಾಗ ಮಾನ್ಯ ಬಂಗಾರಪ್ಪನವರು ಆ ವಿಚಾರದಲ್ಲಿ ಒಂದು ಬಹಳ ಗುರುತರವಾದ ವಿಚಾರವಿದೆ ಎಂದು ಹೇಳಿ ಅದನ್ನು ಅಧ್ಯಕ್ಷರ ಗಮನಕ್ಕೆ ತರಬೇಕೆಂದು ಅವರು ಪ್ರಯತ್ನ ಮಾಡುತ್ತಿದ್ದಾಗ ಅಧ್ಯಕ್ಷರು ಮಧ್ಯೆ ಶ್ರೀ ತಿಮ್ಮಪ್ಪನವರನ್ನು ಕರೆದರು. ಬಂಗಾರಪ್ಪನವರಿಗೆ ಒಂದು ನಿಮಿಷ ಅವಕಾಶ ಸಿಕ್ಕಿದ್ದರೆ ಸಾಕಾಗಿತ್ತು. ಅಷ್ಟಕ್ಕೂ ಅಧ್ಯಕ್ಷರು ಅವಕಾಶ ಕೊಡಲಿಲ್ಲ...............

ಅಧ್ಯಕ್ಷರು.—ನಮ್ಮ ಆಫೀಸಿಗೆ ಅವರು ಕಳುಹಿಸಿದ ಕಾಲಿಂಗ್ ಅಟೆನ್‌ಷನ್ ನೋಟೀಸು ಬಂದು ತಲುಪಿದ ಕೂಡಲೆ ಅವರಿಗೆ ಆ ವಿಚಾರದಲ್ಲಿ ಒಂದು ಎಡಾರ್ಸ್‌ಮೆಂಟನ್ನು ಕಳುಹಿಸಲಾಗಿದೆ. ಹಾಗಿದ್ದೂ ಕೂಡ ಇಲ್ಲಿ ಇದು ಒಂದು ಪ್ರಾಮುಖ್ಯವಾದ ಅಂಶ ಎಂದು ಹೇಳಿ ಎಲ್ಲಾ ವಿಷಯಗಳನ್ನೂ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡುವುದಾದರೆ ಇನ್ನು ಈ ನಿಯಮಾವಳಿಗಳಾದರೂ ಏತಕ್ಕಿರಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ ಹಾಗಾದರೆ ಸದಸ್ಯರು ರೂಲ್ಸ್ ಪ್ರಕಾರ ಅಂದರೆ ರೂಲ್ 59 ಅಥವ 312 ಅಥವ 49 ಪ್ರಕಾರ ನೋಟೀಸನ್ನು ತಮ್ಮ ಒಂದು ಕಾಗದದ ಉತ್ತರಕ್ಕಾಗಿ ಕಳುಹಿಸುವುದಾದರೆ ಅದನ್ನು ಸಂಪೂರ್ಣವಾಗಿ ಕೈಬಿಡುವುದೇ ಲೇಸು. ಅದನ್ನು ಕೈ ಬಿಟ್ಟು ನಮ್ಮ ಅಜೆಂಡಾದಲ್ಲಿ ಏನಿರುತ್ತದೋ ಅಷ್ಟನ್ನೇ ನಾವು ಮಾಡುವುದು ಸರಿ ಅನ್ನುವುದಾದರೆ ಇದಕ್ಕೆ ರೂಲ್ಸ್ ಆದರೂ ಏತಕ್ಕೆ ಬೇಕು ?

ಅಧ್ಯಕ್ಷರು.—ಹಾಗಾದರೆ ಈ ಸಭೆಯವರು ಇಂಥಾ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ತೀರ್ಮಾನ ಮಾಡುವುದಕ್ಕೆ ಅಧ್ಯಕ್ಷರಿಗೆ ಡಿಸ್ಕ್ರಿಷನರಿ ಅಧಿಕಾರವನ್ನು ಕೊಟ್ಟಿಲ್ಲವೇ ? ಹಾಗೆ ಒಂದಾವರ್ತಿ ಡಿಸ್ಕ್ರಿಷನ್ ಉಪಯೋಗಿಸಿ ತೀರ್ಮಾನವಾದುದನ್ನು ಮತ್ತೆ ಪುನರ್‌ಪರಿಶೀಲನೆ ಮಾಡಿ ಎಂದರೆ ಅದರಲ್ಲಿ ಅರ್ಥವಿದೆಯೇ ?

4-00 P. M.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಪುನರಾಲೋಚನೆ ಮಾಡಬೇಕೆಂದು ಕೇಳಲು ಅವಕಾಶವಿದೆಯೇ, ಇಲ್ಲವೇ ಎಂದು ತಮ್ಮನ್ನು ನಾನು ಕೇಳುತ್ತೇನೆ. ಅವಕಾಶವಿದ್ದರೆ ಅದರ ಬಗ್ಗೆ ಹೇಳಲು ಸ್ವಲ್ಪ ಅವಕಾಶ ಕೊಡಿ. ಹಾಗೆ ಪುನರಾಲೋಚನೆ ಮಾಡಬೇಕೆಂದು ಕೇಳಲು ಅವಕಾಶ

ವಿಲ್ಲದಿದ್ದರೆ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇನ್ನು ಮೇಲೆ ಯಾವುದೇ ಸೂಚನೆ ಕಳುಹಿಸಲು ಅವಕಾಶವಾಗುವುದಿಲ್ಲ. ತಮ್ಮ ಆಫೀಸಿನಿಂದ ಎಂಡಾರ್ಸ್‌ಮೆಂಟ್ ಬರುತ್ತದೆ, ನಾವು ಅದು ಬಂದ ಮೇಲೆ ಸುಮ್ಮನೆ ಕೂಡಬೇಕಾಗುವುದು.

ಅಧ್ಯಕ್ಷರು.—ತಾವೇ ಯೋಚನೆಮಾಡಿ, 100-120 ನೋಟೀಸುಗಳು ಬಂದರೆ ಎಲ್ಲಕ್ಕೂ ಅವಕಾಶ ಕೊಡಬೇಕೆಂದರೆ ಹೇಗೆ ಸಾಧ್ಯ? ಮುಖ್ಯವಾಗಿರುವುದನ್ನು ಪರಿವರ್ತನೆ ಮಾಡಲು ಅವಕಾಶ ಇದ್ದಾಗ ಕಳುಹಿಸುತ್ತೇವೆ, ಅದನ್ನು ಮುಚ್ಚಬೇಕೆಂಬ ಉದ್ದೇಶವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕಾನೂನು ಪ್ರಕಾರ ಅಧಿಕಾರ ಚಲಾಯಿಸಲು ತಮಗೆ ಸ್ವಾತಂತ್ರ್ಯವಿದೆ, ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಪುನರ್ಪರಿಶೀಲನೆ ಮಾಡಬೇಕೆಂದು ಹೇಳಲು ಒಂದು ನಿಮಿಷ ಅವಕಾಶ ಕೊಡಿ ಅಂದರೆ ಅವಕಾಶ ಕೊಡದೆ ಶ್ರೀ ತಿಮ್ಮಪ್ಪನವರನ್ನು ಕರೆದಿರಿ. ಹೀಗಾದರೆ ನಾವು ಹೇಗೆ ಕೆಲಸಮಾಡುವುದು ?

Sri D. DEVARAJ URS.—I am sorry, the Leader of the Opposition is digressing from the point. He seems to think that only the Opposition has to function here and as if the Government is not functioning. We have also some difficulties as treasury benches. If the Opposition Member feels that merely because he has certain things to submit and he is not given a chance, he should persist in it. Every member has the same right. Could we also go on persisting ? That is not the point at issue.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ಹೇಗೆ ಮಾಡುವುದು ?

Then guide lines may be given to us from the Leader of the House. Hs soon as we receive an endorsement from the Speaker, shall we keep quiet ?

Sri DEVARAJ URS.—There are the Rules and it is for you to do what you like under the rules. The Opposition Leader is speaking as if he has become a stranger to democratic functioning. Both of us are bound by the Rules.

Sri H. D. DEVE GOWDA.—Should we not have an opportunity to make a request ?

Sri D. DEVARAJ URS.—Request was made and permission was refused. That is a separate issue. But this issue concerns the behaviour of a particular Member of this House. If he is asked by the Speaker to sit down and if he persists in speaking, what should be done ? That is the issue. Every member feels his point to be important. The Speaker has to guide the House as per rules of business. If the Speaker wants to excuse, it is left to the Speaker. At this stage, I would suggest if the Hon'ble Member should persist in making out his point standing consistently in spite of the Speaker's warning, he does not even regret, he does not keep quiet, and he wants the whole House to act according to his whims and fancies, well it may not be thoroughly safe either to the House or to the Speaker.

MADAM SPEAKER.—I think you should withdraw, Mr. Bangarappa.

ಶ್ರೀ ವಾಟಾಳ್‌ನಾಗರಾಜ್.—ಶಿಕ್ಷೆ ಬಹಳ ದೊಡ್ಡದಾಯ್ತು. ಹೀಗೆ ಮಾಡಬಾರದು. ತೀರ ಇಂಥ ಶಿಕ್ಷೆ ವಿಧಿಸಬಾರದು. ನಿಮ್ಮ ಮೇಲೆ ಆರೋಪಣೆ ಇಲ್ಲ. ಸರಕಾರಿ ಪಕ್ಷಕ್ಕೆ ಮೆಜಾರಿಟಿ ಬೆಂಬಲವಿದೆಯೆಂದು ಅದು ಏನು ಬೇಕಾದರೂ ಮಾಡಬಹುದು. ಅವರು ಮಾಡುವ ಅನ್ಯಾಯ ತಮ್ಮ ಮೂಲಕ ತಿಳಿಸಬೇಕಾಗಿದೆ. ಅವರು ಹೇಳಿದಂತೆ ಕೇಳಲು ನಾವು ತಯಾರಿಲ್ಲ. ದಯಮಾಡಿ ಅಧ್ಯಕ್ಷರು ತಮ್ಮ ರೂಲಿಂಗನ್ನು ಪುನರ್ಪರಿಶೀಲನೆ ಮಾಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಬಂಗಾರಪ್ಪನವರು ತಪ್ಪುಮಾಡಿದ್ದರೆ ಅವರು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಲಿ. ಆದರೆ ಅವರು ಒಂದು ನಿಮಿಷ ಅವಕಾಶ ಕೇಳಿದರೆ ಸಿಕ್ಕಲಿಲ್ಲ. ಮೊನ್ನೆ ಪತ್ರಿಕೆಯಲ್ಲಿ ವರದಿಯಾಗಿರುವ ಪ್ರಕಾರ ಕೆಲವರಿಗೆ ಅಸಮಾಧಾನವಾಗಿದೆ. ವಿವರಣೆ ಕೊಡಲು ಒಂದು ನಿಮಿಷ ಅವಕಾಶ ಕೇಳಿದರು, ಆ ವಿಷಯದ ಬಗ್ಗೆ ಪರಿಶೀಲನೆ ಮಾಡಬೇಕೆಂದು ಕೇಳಿದರು. ತಮ್ಮ ರೂಲಿಂಗನ್ನು ಕಡೆಗಣಿಸಿದರೆ ಅದರ ಪರಿಣಾಮವನ್ನು ಎದುರಿಸ ಬೇಕಾಗುವುದು.

MADAM SPEAKER.—Mr. Deve Gowda, that is where you are mixing up issues. As Mr. Arumugam said, if he wants really to express regret. it is for him. Otherwise, he will have to withdraw.

ಶ್ರೀ ಎಸ್. ಬಂಗಾರಪ್ಪ.—ನಾನೇನೂ ತಪ್ಪು ಮಾಡಿಲ್ಲ. ನನಗೆ ಅಧ್ಯಕ್ಷರಲ್ಲಿ ಗೌರವ ಇದೆ. ನಾನು ಅವರನ್ನು ಪ್ರಾರ್ಥನೆ ಮಾಡುತ್ತಿದ್ದೇನೆ. ಪರ್ಸಿಸ್ಟೆಂಟ್ ಆಗಿ ರಿಕ್ವೆಸ್ಟ್ ಮಾಡಿದ್ದೇ ತಪ್ಪು. ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಲು ನಾನು ತಯಾರಿಲ್ಲ.

MADAM SPEAKER. –I will put it to the House:

The question is :

> "That Sri Bangarappa be suspended from the service of the Assembly for the rest of the day."

The motion was adopted.

MADAM SPEAKER.—The Member Mr. Bangarappa may kindly withdraw from the House, now.

(The Member continued to sit in his seat)

MADAM SPEAKER.—If he does not withdraw, the Marshal will come and take him out.

(ಶ್ರೀ ಎಚ್. ಡಿ. ದೇವೇಗೌಡರು.—ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುವಂತೆ ಶ್ರೀ ಬಂಗಾರಪ್ಪನವರಿಗೆ ತಿಳಿಸಿದರು.)

ಶ್ರೀ ವಾಟಾಳ್ ನಾಗರಾಜ್.—ಮಾರ್ಷಲ್ ಬಂದರೆ ನಾವು ವಿರೋಧ ಮಾಡುತ್ತೇವೆ, ಸರಕಾರ ತನಗೆ ಇಷ್ಟ ಬಂದ ಹಾಗೆ ಮಾಡಬಾರದು. ಮಾರ್ಷಲ್ ಬಂದರೆ ನಾವು ಘೇರಾವೊ ಮಾಡುತ್ತೇವೆ. ಬಂಗಾರಪ್ಪನವರಿಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಶ್ರೀ ಶರಣಪ್ಪ.—ಈಗ ಸಭೆಯನ್ನು ಅರ್ಧ ಗಂಟೆ ಅಡ್ಜರ್ನ್ ಮಾಡುವುದು ಒಳ್ಳೆಯದು.

MADAM SPEAKER.—The House stands adjourned for half an hour.

The House rose at Ten Minutes past Four of the Clock and reassembled at Five of the Clock.

[MADAM SPEAKER in the Chair]

Motion to consider Mysore Re-enacting Bill 1973

MADAM SPEAKER.—We shall go to the next item of the business, *viz.*, Legislature Business. Hon. Minister for Finance may please move his Bill.

Sri T. R. SHAMANNA (Fort).—Madam Speaker, I have got an objection for the moving of this Bill.

ಶ್ರೀ ಎಚ್. ಡಿ. ದೇವೇಗೌಡ.—ಬಂಗಾರಪ್ಪನವರು ತಪ್ಪುಮಾಡಿದ್ದರೆ ಅವರು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಲಿ. ಆದರೆ ಅವರು ಒಂದು ನಿಮಿಷ ಅವಕಾಶ ಕೇಳಿದರೆ ಸಿಕ್ಕಲಿಲ್ಲ. ಮೊನ್ನೆ ಪತ್ರಿಕೆಯಲ್ಲಿ ವರದಿಯಾಗಿರುವ ಪ್ರಕಾರ ಕೆಲವರಿಗೆ ಅಸಮಾಧಾನವಾಗಿದೆ. ವಿವರಣೆ ಕೊಡಲು ಒಂದು ನಿಮಿಷ ಅವಕಾಶ ಕೇಳಿದರು, ಆ ವಿಷಯದ ಬಗ್ಗೆ ಪರಿಶೀಲನೆ ಮಾಡಬೇಕೆಂದು ಕೇಳಿದರು. ತಮ್ಮ ರೂಲಿಂಗನ್ನು ಕಡೆಗಣಿಸಿದರೆ ಅದರ ಪರಿಣಾಮವನ್ನು ಎದುರಿಸಬೇಕಾಗುವುದು.

MADAM SPEAKER.—Mr. Deve Gowda, that is where you are mixing up issues. As Mr. Arumugam said, if he wants really to express regret. it is for him. Otherwise, he will have to withdraw.

ಶ್ರೀ ಎಸ್. ಬಂಗಾರಪ್ಪ.—ನಾನೇನೂ ತಪ್ಪು ಮಾಡಿಲ್ಲ. ನನಗೆ ಅಧ್ಯಕ್ಷರಲ್ಲಿ ಗೌರವ ಇದೆ. ನಾನು ಅವರನ್ನು ಪ್ರಾರ್ಥನೆ ಮಾಡುತ್ತಿದ್ದೇನೆ. ಪರ್ಸನಲ್ ಆಗಿ ರೆಕ್ವೆಸ್ಟ್ ಮಾಡಿದ್ದೇ ತಪ್ಪು. ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಲು ನಾನು ತಯಾರಿಲ್ಲ.

MADAM SPEAKER.—I will put it to the House:

The question is :

> "That Sri Bangarappa be suspended from the service of the Assembly for the rest of the day."

The motion was adopted.

MADAM SPEAKER.—The Member Mr. Bangarappa may kindly withdraw from the House, now.

(The Member continued to sit in his seat)

MADAM SPEAKER.—If he does not withdraw, the Marshal will come and take him out.

(ಶ್ರೀ ಎಚ್. ಡಿ. ದೇವೇಗೌಡರು.—ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡುವಂತೆ ಶ್ರೀ ಬಂಗಾರಪ್ಪನವರಿಗೆ ತಿಳಿಸಿದರು.)

ಶ್ರೀ ವಾಟಾಳ್ ನಾಗರಾಜ್.—ಮಾರ್ಷಲ್ ಬಂದರೆ ನಾವು ವಿರೋಧ ಮಾಡುತ್ತೇವೆ, ಸರಕಾರ ತನಗೆ ಇಷ್ಟ ಬಂದ ಹಾಗೆ ಮಾಡಬಾರದು. ಮಾರ್ಷಲ್ ಬಂದರೆ ನಾವು ಘೇರಾವೊ ಮಾಡುತ್ತೇವೆ. ಬಂಗಾರಪ್ಪನವರಿಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಶ್ರೀ ಶರಣಪ್ಪ.—ಈಗ ಸಭೆಯನ್ನು ಅರ್ಧ ಗಂಟೆ ಅಡ್ಜರ್ನ್ ಮಾಡುವುದು ಒಳ್ಳೆಯದು.

MADAM SPEAKER.—The House stands adjourned for half an hour.

The House rose at Ten Minutes past Four of the Clock and reassembled at Five of the Clock.

[MADAM SPEAKER in the Chair]

Motion to consider Mysore Re-enacting Bill 1973

MADAM SPEAKER.—We shall go to the next item of the business, *viz.*, Legislature Business. Hon. Minister for Finance may please move his Bill.

Sri T. R. SHAMANNA (Fort).—Madam Speaker, I have got an objection for the moving of this Bill.

MADAM SPEAKER.—What is that objection please ?

† Sri T. R. SHAMANNA.—This Bill implies collection of more than 5 crores of rupees and further it involves considerable expenses to employment.

MADAM SPEAKER.— Let him move the Bill and he will explain all these things after moving it.

Sri T. R. SHAMANNA.—I am raising my objection for moving the Bill itself. This Bill involves collection of about 5 crores of rupees and more and it incurs expenditure on establishment. Under Rule 68 a bill involving an expenditure shall be accompanied by a financial memorandum which shall invite particular attention to the clauses involving expenditure and shall also give an estimate of the recurring and non-recurring expenditure involved in case the Bill is passed into law. This Bill replaces a Bill that was passed last year and is not attached with a financial memorandum as required under Rule 68. Further it implies the question of delegation of power in many cases such as investigation, legal proceedings and then punishment, penalty and all that and further it is not accompanied with the explanatory note and financial memorandum. Considering all aspects of the matter, the moving of the Bill is out of order and I object for the Bill being moved.

Sri M. S. KRISHNAN (Malleswaram).—There is one more point. Article 304 of the Constitution says–

> "Notwithstanding anything in Article 301 or Article 303, the Legislature of a State may by law--
>
> (*a*) impose on goods imported from other States (or the Union territories) any tax to which similar goods manufactured or produced in that State are subject, so, however as not to discriminate between goods so imported and goods so manufactured or produced and
>
> (*b*) impose such reasonable restrictions on the freedom of trade, commerce or intercourse with or within that State as may be required in the public interest :
>
> Provided that no Bill or amendment for the purposes of Clause (b) shall be introduced or moved in the Legislature of a State without the previous sanction of the President."

This is one aspect. I consider that the President's assent is not obtained. Secondly I draw the attention of the House to Article 207. It reads thus :

> "207. (1) A Bill or amendment making provision for any of the matters specified in sub-clauses (a) to (f) of clause (1) of Article 199 shall not be introduced or moved except on the recommendation of the Governor, and a Bill making such provision shall not be introduced in a Legislative Council."

(SRI M. S. KRISHNAN)

That means we have to look into Article 199. It speaks of money Bill. It reads thus:

"199. (1) For the purposes of this Chapter, a Bill shall be deemed to be a Money Bill if it contains only provisions dealing with all or any of the following matters, namely-

(*a*) the imposition, abolition, remission, alteration or regulation of any tax;......"

I consider that this comes under this Article 199 (a) which says imposition, abolition, remission, alteration or regulation of any tax It is the imposition or reimposition of tax. Secondly it also regulate. tax both imposition and regulation. I consider it is the reimposition of the tax which had been levied because of the Bangladesh. But now that is removed. Under another guise the same tax is continued. For the laudable objective of the peoples housing programme the tax is imposed. Under the new name it becomes imposition. When it is once abolished it has been brought again under a new name. Under these circumstances it requires President's assent and it cannot be introduced by the Minister by the virtue of Articles 199 and 207 of the Constitution.

MADAM SPEAKER.—I have read the letter received from the Governor in this connection. ಖರ್ಚಿನ ವಿಚಾರದಲ್ಲಿ ಸರ್ಕಾರದವರು ಏನು ಹೇಳುತ್ತಾರೋ ನೋಡೋಣ ?

Sri M. Y. GHORPADE (Minister for Finance).—Hon. Member Sri Shamanna raised one or two simple objectio ns like non-accompaniment of financial memorandum etc. ಇಲ್ಲಿ ಹಣ ಖರ್ಚು ಮಾಡಬೇಕಾದ ಅವಶ್ಯಕತೆ ಇಲ್ಲ; ಆದ್ದರಿಂದ ಫೈನಾನ್ಸಿಯಲ್ ಮೆಮೊರ್ಯಾಂಡಮ್‌ನ ಅವಶ್ಯಕತೆ ಬರುವುದಿಲ್ಲ. ಮಾನ್ಯ ಸದಸ್ಯರು 5 ಕೋಟಿ ರೂಪಾಯಿಗಳ ವಿಚಾರ ಹೇಳಿದರು. ಅದು ಸರಿಯಲ್ಲ. ಈ ಬಿಲ್‌ನ್ನು ಮೂವ್ ಮಾಡಿದ ನಂತರ ಸಾಕಷ್ಟು ವಿವರಗಳನ್ನು ಕೊಡುತ್ತೇನೆ. ಅವನ್ನೆಲ್ಲಾ ತಿಳಿದುಕೊಂಡು ಏನಾದರು ಪ್ರಶ್ನೆ ಕೇಳುವುದಿದ್ದರೆ ಮಾನ್ಯ ಸದಸ್ಯರು ಕೇಳಬಹುದು. ನಂತರ ನಾನು ನನ್ನ ಉತ್ತರದಲ್ಲಿ ಸ್ಪಷ್ಟೀಕರಣ ಮಾಡುತ್ತೇನೆ.

Sri T. R. SHAMANNA.—Are you going to collect tax without any expenditure?

Sri M. Y. GHORPADE.—ಅದರ ಬಗ್ಗೆ ಬೇರೆ ಬಿಲ್ ತರುತ್ತೇವೆ. I beg to move

"That the Mysore Re-enacting Bill, 1973 be taken into consideration."

MADAM SPEAKER.—Motion moved:

"That the Mysore Re-enacting Bill, 1973 be taken into consideration."

† ಶ್ರೀ ಎಂ. ವೈ. ಘೋರ್ಪಡೆ — ಮಾನ್ಯ ಅಧ್ಯಕ್ಷರೇ, ಈ ಬಿಲ್‌ನ್ನು ತಂದಿರುವುದರ ಉದ್ದೇಶ ಏನೆಂದರೆ, 1971ನೇ ಇಸವಿಯಲ್ಲಿ ಜಾರಿಗೆ ತರಲಾಗಿದ್ದ ಬಂಗ್ಲಾದೇಶದ ನಿರಾಶ್ರಿತರಿಗೆ ಸಂಬಂಧಪಟ್ಟ ತೆರಿಗೆಗಳನ್ನು ಏನು ವಸೂಲಿ ಮಾಡಲಾಗುತ್ತಿತ್ತು, ಅದರ ಅವಧಿ ಈ ತಿಂಗಳ 20ನೇ ತಾರೀಖಿಗೆ ಮುಗಿದುಹೋಗುತ್ತದೆ. ಅದನ್ನು ಮುಂದುವರೆಸಬೇಕಾದರೆ ಈ ಬಿಲ್‌ನ್ನು ಪಾಸ್ ಮಾಡ

ಬೇಕಾಗುತ್ತದೆ. ಬಾಂಗ್ಲಾದೇಶದ ನಿರಾಶ್ರಿತರಿಗೆ ಸಹಾಯ ಮಾಡುವ ದೃಷ್ಟಿಯಿಂದ 1971ನೇ ಇಸವಿಯಲ್ಲಿ ಇಡೀ ದೇಶದಲ್ಲಿ ಅಡಿಷನಲ್ ಲೆವೀಸ್‌ನ್ನು ಕೇಂದ್ರ ಸರ್ಕಾರದವರು ಜಾರಿ ಮಾಡಬೇಕೆಂದು ಹೊರಟಾಗ, ಅವರ ಒಂದು ಸಲಹೆಯ ಪ್ರಕಾರ ಬೇರೆ ಬೇರೆ ರಾಜ್ಯಗಳಲ್ಲಿ ಈ ಒಂದು ತೆರಿಗೆಯನ್ನು ವಸೂಲಿ ಮಾಡುವುದಕ್ಕೆ ಪ್ರಾರಂಭ ಮಾಡಿದರು.

Withdrawal of suspension order of Sri S. Bangarappa

SRI C. M. ARUMUGHAM (K.G.F.).—Sri Bangarappa was named by the Hon Speaker and the House suspended him for the day. Since he has snbmitted a letter of regret the decision may be revoked and Sri Bangarappa may be permitted to attend the House.

I move that the suspension order of Sri S. Bangarappa may kindly be revoked.

† SRI K. PUTTASWAMY (Chamundeshwari).—Such a motion is always preceded by consultation between the Leaders of the parties. I do not know whether the Leader of the House has been consulted. In the absence of the consultation it would be rather very difficult to members like us to react. Perhaps consultation may be done between the leaders of the parties and the Speaker in order to enable the Speaker to permit the moving of the motion. Otherwise it would be very difficult and we will be setting up an inconvenient precedent.

MADAM SPEAKER.—I have received a letter of apology saying 'I do not mean any disrespect to the House or the Chair, I regret to the House and the Chair.' I think this can be accepted.

SRI D. DEVARAJ URS.—If the speaker is satisfied, I have no objection.

MADAM SPEAKER. I put it to the House. The question is "that suspension order of Sri S. Bangarappa be with drawn".

The motion was adopted.

Mysore Re-enacting Bill 1973

Motion to consider [*Contd*]

† ಶ್ರೀ ಎಂ.ವೈ. ಘೋರ್ಪಡೆ.—ನಾನು ಹೇಳುತ್ತಿದ್ದೆ, ಬಾಂಗ್ಲಾದೇಶದ ಲೆವಿ ಪ್ರೆಸಿಡೆಂಟ್ ಆಕ್ಟ್ ಪ್ರಕಾರ ಜಾರಿಯಲ್ಲಿತ್ತು ಎಂದು. ಮಾರ್ಚಿ 20ನೇ ತಾರೀಖಿಗೆ ಇದರ ಅವಧಿ ಮುಗಿದು ಹೋಗುತ್ತದೆ. ಆದಕಾರಣ ಅದಕ್ಕಿಂತ ಮುಂಚೆ ಈ ಸಭೆಯಲ್ಲಿ ಈ ರೀತಿ ಒಂದು ಹೊಸ ಕಾನೂನು ಮಾಡದೇ ಹೋದರೆ ಈ ಲೆವಿಯನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ. ಈ ಒಂದು ದೃಷ್ಟಿಯಿಂದ ಸ್ವಲ್ಪ ಅವಸರದಲ್ಲಿ ಈ ಬಿಲ್ಲನ್ನು ಈ ಸಭೆಯ ಮುಂದೆ ತರಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಸೇಲ್ಸ್ ಟ್ಯಾಕ್ಸ್, ವೆಹಿಕಲ್ ಟ್ಯಾಕ್ಸ್ ಮತ್ತು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಮತ್ತು ಸ್ಟ್ಯಾಂಪ್ಸ್ ಈ ತೆರಿಗೆಗಳ ಮೇಲೆ ಬಾಂಗ್ಲಾದೇಶಕ್ಕೋಸ್ಕರ ಸರ್‌ಚಾರ್ಜ್ ಹಾಕಿ ವಿಶೇಷವಾದ ತೆರಿಗೆಯನ್ನು ಹಾಕಿತ್ತು. ಅದರ ಅವಧಿ ಮಾರ್ಚಿ 20ನೇ ತಾರೀಖಿಗೆ ಮುಗಿ